## 80

# “ಮುಂದುವರಿದ ಭಾಗ”

ನನ್ನ ಆತ್ಮೀಯ ಗೆಳೆಯನಾದ, ಹೆಲೆನ್ ಬಾಯಲ್‌ರವರು ಆರ್ಕಾನ್‌ಸಸ್‌ನ, ಜೂಡೋ ಸೋನಿಯ ಸಭೆಯ ಇತಿಹಾಸವನ್ನು ಸಭೆಯ ಮಾಸಿಕದಲ್ಲಿ ಪ್ರಕಟಿಸುತ್ತಿರುವರು. ಆಕೆಯು ಪ್ರತಿವಾರವೂ ತನ್ನ ಬರವಣಿಗೆಯನ್ನು ಅಂತ್ಯಗೊಳಿಸುವಾಗ, “ಮುಂದುವರೆಸಲಾಗುವದು” ಎಂದು ಬರೆಯುತ್ತಾಳೆ. ಆ ಹೇಳಿಕೆಯನ್ನು ಓದುವಾಗ, ಆಕೆಯ ಬರವಣಿಗೆಯ ಇನ್ನೂ ಅಂತ್ಯವಾಗಿರುವದಿಲ್ಲ ಇನ್ನೂ ಬಹಳಷ್ಟು ಮುಂದುವರೆಯುವದಿದೆ ಎಂದು ನಾವುಗಳು ತಿಳಿಯುತ್ತೇವೆ.

ಲೂಕನ ದಿವಸಗಳಲ್ಲಿ ಈ ವಿಧವಾದ ಬರವಣಿಗೆಯ ಇದಿದ್ದರೆ, ಅವನು ಅಪೊಸ್ತಲರ ಕೃತ್ಯಗಳು 28:31ರ ವಾಕ್ಯದ ಅಂತ್ಯದಲ್ಲಿ, (ಈ ಹಿಂದಿನ ಪಾಠದಲ್ಲಿ ತಿಳಿಸಿರುವಂತೆ) ಸುವಾರ್ತಾ ಪ್ರಸಾರಣದ ಆರಂಭ ಎಂದು ಉಲ್ಲೇಖಿಸುತ್ತಿದ್ದನು. ಪ್ರತಿಯೊಬ್ಬ ದೇವ ಜನರ ಜೀವಿತದಲ್ಲಿ, ಅವರ ಮುಂದಿನ ಪೀಳಿಗೆಯು ಇದನ್ನು “ಮುಂದುವರಿಸಿಕೊಂಡು ಹೋಗ ಬೇಕು.”

ನಾನು ಈ ಸರಣಿಯನ್ನು “ಆನಂದ ದಾಯಕವಾದ ಕ್ರೈಸ್ತತ್ವ ಎಂದು” ಕರೆಯುತ್ತೇನೆ: ಲೂಕನು ಆ ಪುಸ್ತಕವನ್ನು ಈ ವಿಧವಾಗಿ ಅಂತ್ಯಗೊಳಿಸಿರುವದರಿಂದ, ಅದರ ಆನಂದವು ಕ್ಷೀಣವಾಯಿತು ಎಂದು ನಾವುಗಳು ತಿಳಿಯ ಬಾರದು, ತದ ನಂತರದ ದಿನಗಳಲ್ಲೂ ಆ ಆನಂದವು ಮುಂದುವರಿಯಿತು; ಈಗಲೂ ಅದು ಮುಂದುವರಿಯಬೇಕು.

ಅಪೊಸ್ತಲ ಕೃತ್ಯವನ್ನು ಉಪದೇಶಿಸುವ ನಾವುಗಳು, ವಿಶೇಷ ಕಳಕಳಿಯನ್ನು ಹೊಂದಿರಬೇಕು: ಅಪೊಸ್ತಲರ ಕೃತ್ಯದ ಅಧ್ಯಯನವನ್ನು ಮೊದಲ ಶತಮಾನದ ಚರಿತ್ರೆ ಮಾತ್ರ ಎಂದು ತಿಳಿಯದೆ, ಇಪ್ಪತ್ತನೇ ಶತಮಾನದಲ್ಲೂ ಮುಂದುವರಿಸಬೇಕಾದ ಕಾರ್ಯ ಎಂದು ನಾವುಗಳು ಅರಿಯಬೇಕು. “ಹೊರಟು ಹೋಗಿ ಇದರಂತೆ ಮಾಡಿರಿ” ಎಂಬುದನ್ನು ಪಾಲಿಸಲು *“ಕ್ವೀನ್ ಮೇರಿಯ”* ಪಾಠವನ್ನು ತಿಳಿಯಲೇ ಬೇಕು.

ಕ್ವೀನ್ ಮೇರಿ, ಸಮುದ್ರದ ಮೇಲೆ ಪ್ರಯಾಣಿಸುವ ದೊಡ್ಡ ಹಡಗಾಗಿದೆ, ಅದು ಬಹಳ ಅಮೋಘವಾದ ಹಡಗಾಗಿತ್ತು, ಮತ್ತು ಅದು ಪ್ರಯಾಣಿಕರ ಹಡಗಾಗಿತ್ತು. ಎರಡನೆ ಮಹಾ ಯುದ್ಧದ ಸಮಯದಲ್ಲಿ, ಅದನ್ನು ಸೈನಿಕರಿಗಾಗಿ ಬಳಸಲಾಯಿತು; ಆ ಸಮಯದಲ್ಲಿ ಅದಕ್ಕೆ ನಾಜಿಗಳ ಸಬ್‌ಮೆರಿನ್‌ಗಳಿಂದ ಯಾವಾಗಲೂ ಅಪಾಯ ಉಂಟಾಗುವ ಸಾಧ್ಯತೆಯಿತು. ಈ ದಿವಸ ಅದನ್ನು ಕ್ಯಾಲಿಫೋರ್ನಿಯದ ಹಡಗುದಾಣದಲ್ಲಿ ನಿಲ್ಲಿಸಲಾಗಿದೆ. ಅದರ ದೊಡ್ಡ ಎಂಜಿನ್‌ಗಳನ್ನು ತೆಗೆದುಹಾಕಲಾಗಿದೆ, ಅದರ ಜೊತೆಗೆ ಯಾನದ ಇತರೆ ಉಪಕರಣಗಳನ್ನು ಸಹ ತೆಗೆದು ಹಾಕಲಾಗಿದೆ. ಅದರ ನೆನಪನ್ನು ಉಂಟುಮಾಡುವ ಅನೇಕ ಅಂಗಡಿಗಳನ್ನು ಅದರಲ್ಲಿ ನಿರ್ಮಿಸಲಾಗಿದೆ. ದೊಡ್ಡ ಕೊಠಡಿಗಳನ್ನು ಸಮ್ಮೇಳನಗಳಿಗಾಗಿ ಬಳಸಾಗುತ್ತಿದೆ; ಅದರ ಕ್ಯಾಬಿನ್‌ಗಳನ್ನು ಹೋಟೆಲ್‌ಗಳಿಗೆ ನೀಡಲಾಗಿದೆ. ಅನೇಕ ನಟರು ಅದರಲ್ಲಿ ನಾವಿಕರಂತೆ ನಟಿಸಿರುವರು ಆದೊಡ್ಡ ಹಡಗು ಒಂದು ವಸ್ತು ಪ್ರದರ್ಶನದ ಆಲಯವಾಗಿದೆ.

ಅಪೊಸ್ತಲರ ಕೃತ್ಯಗಳು ಅಧ್ಯಯನದಲ್ಲಿ ನಮ್ಮ ಕರ್ತನ ಸಭೆಯ ಸ್ಥಾಪನೆಯನ್ನು ನೋಡಿದ್ದೇವೆ. ಅದು ಅದ್ಭುತವಾದ ಆರಂಭವಾಯಿತು, ನಂತರ ದೇವ ಜನರು ಸುವಾರ್ತೆಯನ್ನು ಜನ ಸಂದಣಿಯ ಪ್ರದೇಶಗಳಿಗೆ ಕೊಂಡೊಯ್ದರು! ನಾವು ಎಚ್ಚರವಾಗದಿದ್ದರೆ, ಸಭೆಯು ಒಂದು ವಸ್ತು ಪ್ರದರ್ಶನದ ಆಲಯವಾಗುವದಕ್ಕೆ ಸಾಧ್ಯವಿದೆ - ಪುರಾತನ ವಸ್ತುಗಳ ಸಂಗ್ರಹಾಲಯವಾಗುತ್ತದೆ. ಆದರೆ ಅದು ದೇವರ ಉತ್ತಮವಾದ ಕಾರ್ಯಗಳ ಮುಂದುವರಿಯುವ ಸ್ಥಳವಾಗಬೇಕು.

ಲೂಕನು ಅಂತ್ಯಗೊಳಿಸಿದ ಅಂಶದಿಂದ ನಾನು ಈ ಅಧ್ಯಯನವನ್ನು ಮುಂದುವರಿಸುತ್ತೇನೆ. ಪೌಲನಿಗೆ ಆದ ವಿಚಾರದ ಕುರಿತು ಒಂದು ಅಂಶವನ್ನು (ತೆರೆದ ಮನಸ್ಸಿನಿಂದ) ನೋಡಲಿದ್ದೇವೆ, ನಮ್ಮನ್ನು ತೃಪ್ತಿಪಡಿಸಲು ಲೂಕನು ಇದನ್ನು ಬರೆದಿರುವದಿಲ್ಲ, ನನ್ನ ಉದ್ದೇಶವೂ ಇದಾಗಿರುವದಿಲ್ಲ, ಆದರೆ ಎಲ್ಲಕ್ಕಿಂತ ಮಿಗಿಲಾಗಿ, ಪೌಲನು ಆರಂಭ ಮಾಡಿದ ಕಾರ್ಯಗಳನ್ನು ನಂಬಿಗಸ್ತರಾದ ಕ್ರೈಸ್ತರು ಹೇಗೆ ಮುಂದುವರಿಸಬೇಕೆಂಬ ಉದ್ದೇಶವಾಗಿದೆ!

## ಅಪೊಸ್ತಲರ ಕೃತ್ಯದ ಪೌಲನ ಕಾರ್ಯಗಳನ್ನು ಮುಂದುವರಿಸುವ ಕುರಿತು

ಅಪೊಸ್ತಲರ ಕೃತ್ಯಗಳು 28:31ರ ನಂತರ ಪೌಲನು ಏನಾದನು? ಎಸುಬೀಯಸ್, ಎಂಬ "ಸಭಾ ಚರಿತ್ರೆಯ ತಂದೆಯು" ಬರೆದು, "ಅವನು ತನ್ನ ಪಿರ್ಯಾದನ್ನು ಸಲ್ಲಿಸಿದ ನಂತರ" ಯಶಸ್ವಿಯಾದವನಾಗಿ, ಅಪೊಸ್ತಲನು ಸುವಾರ್ತೆ ಸಾರುವದನ್ನು ಮುಂದುವರೆಸಿದನು, ಮತ್ತು ನೀರೋ ಚಕ್ರವರ್ತಿಯ ಕಾಲದಲ್ಲಿ ರಕ್ತಸಾಕ್ಷಿಯಾದನು, ಅವನು ರೋಮಾಯಕ್ಕೆ ಎರಡನೇ ಸಾರಿ ಬಂದಾಗ ಅವನಿಗೆ ಮರಣ ಉಂಟಾಯಿತು.[1] ಪೌಲನು ಎರಡುಸಾರಿ ಸೆರೆವಾಸವಾದನು ಮತ್ತು ಆ ಸಂದರ್ಭದಲ್ಲಿ, ಅವನು, ಇನ್ನೊಂದು ಪ್ರಯಾಣವನ್ನು ಮಾಡಿದನೆಂಬ ಸ್ಪಷ್ಟತೆಯಿದೆ:

ಮೊದಲನೆಯದಾಗಿ ಸೆರೆಮನೆ ಪತ್ರಿಕೆಗಳಿಗೂ[2] ಮತ್ತು 2 ತಿಮೊಥಿ ಪತ್ರಿಕೆಗೂ ನಡುವೆ ಇರುವ ಅನೇಕ ವ್ಯತ್ಯಾಸಗಳನ್ನು ನೋಡುತ್ತೇವೆ. ಎರಡನೇ ತಿಮೊಥಿ ಪತ್ರಿಕೆಯನ್ನು ಬರೆಯುವಾಗ ಪೌಲನು ಸೆರೆಯಲ್ಲಿದ್ದನು (2 ತಿಮೊಥೆ 1:8; 2:9), ಆದರೆ ಈ ಮೇಲಿನ ಎರಡರ ನಡುವೆ ಇರುವ ವ್ಯತ್ಯಾಸಗಳನ್ನು ಮೊದಲನೆಯದಾಗಿ ಗಮನಿಸೋಣ: ಸೆರೆಮನೆ ಪತ್ರಿಕೆಗಳ ಬರವಣಿಗೆಗಳು ಸಂತೋಷಕರವಾಗಿದ್ದರೆ, 2ನೇ ತಿಮೊಥಿಯ ಬರವಣಿಗೆಯಲ್ಲಿ ಖಿನ್ನತೆಯನ್ನು ಕಾಣುತ್ತೇವೆ. ಸೆರೆಮನೆಯ ಪತ್ರಿಕೆಗಳನ್ನು ಬರೆಯುವಾಗ, ಅವನ ಸುತ್ತಲೂ ಅವನ ಸ್ನೇಹಿತರಿದ್ದರು; ಆದರೆ 2 ತಿಮೊಥಿ ಪತ್ರಿಕೆಯನ್ನು ಬರೆಯುವಾಗ, ಲೂಕನ ಹೊರತಾಗಿ ಎಲ್ಲರೂ ಅವನನ್ನು ತೊರೆದು ಹೋಗಿದ್ದರು (2 ತಿಮೊಥೆ 4:11). ತಾನು ಬಿಡುಗಡೆಗೊಳ್ಳುವೆನು ಎಂದು ನಿರೀಕ್ಷಿಸಿದ ಸಮಯದಲ್ಲಿಯೆ, ಪೌಲನು ಸೆರಮನೆ ಪತ್ರಿಕೆಗಳನ್ನು ಬರೆದನು (ಫಿಲಿಪ್ಪಿ 1:25, 26; 2:24; ಫಿಲೆಮೋನ 22);[3] ಆದರೆ 2 ತಿಮೊಥೆಯ ಸಮಯದಲ್ಲಿ, ಮರಣವನ್ನು ನಿರೀಕ್ಷಿಸಿದನ್ನು (2 ತಿಮೊಥೆ 4:6, 7). ಈ ಪುರಾವೆಗಳಿಂದ, ಪೌಲನು ಎರಡು ಸಾರಿ ರೋಮಾಯದಲ್ಲಿ ಬಂಧನಕ್ಕೊಳಗಾಗಿದ್ದನು ಎಂದು ಅರಿಯುತ್ತೇವೆ.

ಎರಡನೆಯದಾಗಿ, ತಿಮೊಥಿ ಹಾಗೂ ತೀತನ ಪತ್ರಿಕೆಯಲ್ಲಿರುವ ಕೆಲವು ಘಟಾನವಳಿಗಳಿಗೂ ಹಾಗೂ ಅಪೊಸ್ತಲರ ಕೃತ್ಯದ ಘಟನೆಗಳಿಗೂ ಹೊಂದಾಣಿಕೆ ಇರುವದಿಲ್ಲ. J. W. ಮೆಕ್‌ಗಾರ್ವೆಯರು ಕೆಲವು ನಿದರ್ಶನಗಳನ್ನು ನೀಡಿರುವರು:

> ನಾನು ಮಕೆದೋನ್ಯಕ್ಕೆ ಹೋಗುತ್ತಿದ್ದಾಗ ನೀನು ಎಫೆಸದಲ್ಲೇ ಇದ್ದುಕೊಂಡು ಅಲ್ಲಿರುವ ಕೆಲವರಿಗೆ - ನೀವು ಬೇರೆ ಉಪದೇಶವನ್ನು ಮಾಡಬಾರದೆಂತಲೂ (1 ತಿಮೊಥೆ 1:3); ನೀನು ಕ್ರೇತದ್ವೀಪದಲ್ಲಿ ಇನ್ನೂ ಕ್ರಮಕ್ಕೆ ಬಾರದಿರುವ ಕಾರ್ಯಗಳನ್ನು ಕ್ರಮಪಡಿಸಿ ಪಟ್ಟಣಪಟ್ಟಣಗಳಲ್ಲೂ ಸಭೆಯ ಹಿರಿಯರನ್ನು ನೇಮಿಸಬೇಕೆಂದು ನಾನು ನಿನಗೆ ಅಪ್ಪಣೆಕೊಟ್ಟು ನಿನ್ನನ್ನು ಅಲ್ಲೇ ಬಿಟ್ಟು ಬಂದೆನಲ್ಲಾ (ತೀತ 1:5); ಎರಸ್ತನು ಕೊರಿಂಥದಲ್ಲಿ ನಿಂತನು. ತ್ರೊಫಿಮನು ಅಸೌಖ್ಯವಾಗಿದ್ದದರಿಂದ ಅವನನ್ನು ಮಿಲೇತದಲ್ಲಿ ಬಿಟ್ಟೆನು (2 ತಿಮೊಥೆ 4:20); ನಾನು ನಿಕೊಪೊಲಿಯಲ್ಲಿ ಚಳಿಗಾಲವನ್ನು ಕಳೆಯಬೇಕೆಂದು ನಿಶ್ಚಯಿಸಿಕೊಂಡದರಿಂದ (ತೀತ 3:12).[4]

ಪೌಲನ ಮೊದಲನೆ ಕಾರಾಗೃಹದ ಬಂದನದಿಂದ ಬಿಡುಗಡೆಗೊಳಿಸಿದ ಕುರಿತು, ತರುವಾಯದ ತಿಳಿಸಿ ಪ್ರಯಾಣದ ಬಗ್ಗೆಯೂ ಪ್ರೇರಿತರಲ್ಲದ ಕೆಲವು ಬರಹಗಾರರು ತಿಳಿಸಿರುವರು.

ಉದಾಹರಣೆಗೂ, ರೋಮಾಪುರದ ಕ್ಲೆಮೆಂಟನು (ಹೋಲಿಸು ಕ್ರಿ.ಶ. 96) ಪೌಲನು "ಲೋಕದವರಿಗೆಲ್ಲ ನೀತಿಯನ್ನು ಬೋಧಿಸಿದನು" ಎಂದು ಹೇಳಿದನು, ಮತ್ತು "ಅವನು ಪಶ್ಚಿಮದ ಅವನತಿ ಸ್ಥಳಕ್ಕೆ ಹೋದನು ಎಂದು ತಿಳಿಸಿರುವನು."[5] ದಿ ಮೂರಾಟೇರಿಯನ್ ಕಾನನ್ (ಹೋಲಿಸು ಕ್ರಿ.ಶ. 170-190) ಪೌಲನ ಪ್ರಯಾಣದ ಕುರಿತು "ಅವನು ಪಟ್ಟಣದಿಂದ (ರೋಮಾ) ಸ್ಪೇನ್‌ಗೆ[6] ಹೋದನು." ಎಂದು ತಿಳಿಸಿರುವನು. ಇಂತಹ ಉಲ್ಲೇಖಗಳು ಪ್ರೇರಿತ ವಾದವುಗಳಲ್ಲ; ಆದರೆ ಗ್ರಂಥಗಳ ಬೆಳಕಿನಲ್ಲಿ ಗಮನಿಸುವಾಗ, ಅವುಗಳಲ್ಲಿ ಕೆಲವು ಪುರಾವೆಗಳು ಇರುತ್ತವೆ.

ಕೆಲವು ದೊರೆತ ಮಾಹಿತಿಗಳ ಪ್ರಕಾರ, ಅಪೊಸ್ತಲರ ಕೃತ್ಯಗಳು 28:31ರ ನಂತರದ ವಿಚಾರಗಳ ಕುರಿತು ಕೆಲವು ವಿಚಾರ ಧಾರೆಗಳನ್ನು ಕಾಣಬಹುದು (ಅಪೊಸ್ತಲ ಕೃತ್ಯಗಳು ಅಂತ್ಯಗೊಂಡಾಗ) ಅಂತಿಮವಾಗಿ ಪೌಲನು ನೀರೋ ಚಕ್ರವರ್ತಿಯ ಮುಂದೆ ತನ್ನ ವಾದವನ್ನು ಮಂಡಿಸಿದನು (ಅಪೊಸ್ತಲ ಕೃತ್ಯಗಳು 27:24).[7] ಫೆಲಿಕ್ಸನ, ಫೆಸ್ತನ, ಹಾಗೂ ಅಗ್ರಿಪ್ಪನ ಮುಂದೆ ಮಂಡಿಸಿದ ವಾದಕ್ಕಿಂತಲೂ, ನೀರೋ ಚಕ್ರವರ್ತಿಯ ಮುಂದೆ ಅಪೊಸ್ತಲನು ವಿಶೇಷವಾದವನ್ನು ಮಂಡಿಸಿರಬಹುದು. ನೀರೋನ ಪ್ರತಿಕ್ರಿಯೆಯನ್ನು ನಾವು ಅರಿತಿರುವದಿಲ್ಲ, ಆದರೆ ಒಂದು ನಿಶ್ಚಯದ ಸಂಗತಿ ಏನೆಂದರೆ, (ನೀರೋ) ಅವನು ತನ್ನ ಪಾಪದ ಸ್ವಭಾವವನ್ನು ನಿರಾಕರಿಸಿ ಒಬ್ಬ ಕ್ರೈಸ್ತನಾಗಿರಬಹುದು!

ಅವನ ವಿಚಾರಣೆಯ ಸಮಯದಲ್ಲಿ, ಫೆಸ್ತನ ಹಾಗೂ ಯೂಲ್ಯನ ಕುರಿತಾದ ಸಾಕ್ಷಿಯ ಪೌಲನ ಪರವಾಗಿಯೇ ಇರಬಹದು. ಕ್ರಿ.ಶ. 62ರಲ್ಲಿ ಈ ಸಾಕ್ಷಿಯು ನಿಮಿತ್ತವಾಗಿಯೇ ಪೌಲನು ಬಿಡುಗಡೆಗೊಂಡನು.

ಸ್ಪೇನ್ ದೇಶದಲ್ಲಿ ಸುವಾರ್ತೆಯನ್ನು ಸಾರುವ ಹಂಬಲವನ್ನು ಪೌಲನು ಹೊಂದಿದ್ದರಿಂದ (ರೋಮಾಪುರ 15:24, 28). ಇದು ಅವನು ಸೇರಬೇಕಾದ ಪ್ರಥಮ ಸ್ಥಳವೂ ಆಗಿರಬಹುದು.[8] ಅವನು ನಿಶ್ಚಯವಾಗಿಯೂ ಕ್ರೇತವನ್ನು ತಲುಪಿದ್ದನು (ತೀತ 1:5), ಅಲ್ಲಿ ಅವನು ಮಿಲೇತೆನನ್ನು ತೀತನನ್ನು ಬಿಟ್ಟಿದ್ದನು (2 ತಿಮೊಥೆ 4:20), ಮತ್ತು ಅನಾರೋಗ್ಯದಲ್ಲಿದ್ದ ತ್ರೋಫಿಮನನ್ನು ಬಿಟ್ಟನು. ನಂತರ ತನ್ನ ಸ್ನೇಹಿತನಾದ ಫಿಲೆಮೋನನನ್ನು ಸಂಧಿಸಲು, ಮಿಲೇತೆಯಿಂದ ಹೊರಟು ಕೊಲೊಸ್ಸೆಗೆ ಹೋಗಿರಬಹುದು (ಫಿಲೆಮೋನ 22). ಅವನು ತಾನು ಎಫೆಸದ ಹಿರಿಯರನ್ನು ಪುನಃ ಸಂಧಿಸುವದಿಲ್ಲ ಎಂದು ತಿಳಿದಿದ್ದನು (ಅಪೊಸ್ತಲ ಕೃತ್ಯಗಳು 20:25). ಹೇಗೋ ಅವರನ್ನು ಪುನಃ ಸಂಧಿಸುವ ಅವಕಾಶವನ್ನು ದೇವರು ನೀಡಿದ್ದರಿಂದ ಅವನಿಗೆ ಎಷ್ಟು ಆನಂದವಾಗಿರಬಹುದು! (1 ತಿಮೊಥೆ 1:3 ನೋಡಿರಿ.) ಪೌಲನು ಸಭೆಗೆ ಸಹಾಯವಾಗುವಂತೆ ತಿಮೊಥೆಯನ್ನು ಎಫೆಸದಲ್ಲಿ ಬಿಟ್ಟನು, ನಂತರ ಅವನು ಮೆಕೆದೋನ್ಯಕ್ಕೆ ಹೋದನು (1 ತಿಮೊಥೆ 1:3).

ಮೆಕೆದೋನ್ಯದ ಮಾರ್ಗ ಮಧ್ಯದಲ್ಲಿ, ಪೌಲನು ತ್ರೋವದಲ್ಲಿ ಇಳುಕೊಂಡನು. ಅಲ್ಲಿ ಅವನು ತನ್ನ ಮೇಲಂಗಿಯನ್ನು ಹಾಗೂ ಚರ್ಮದ ಕಾಗದಗಳನ್ನು ಸ್ನೇಹಿತನಲ್ಲಿ ಬಿಟ್ಟನು (2 ತಿಮೊಥೆ 4:13), ಬಹುಶಃ ಹಿಂದಿರುಗುವಾಗ ಪುನಃ ತೆಗೆದುಕೊಳ್ಳಬೇಕೆಂದಿದ್ದನು. ಅವನು ಮೆಕೆದೋನ್ಯಕ್ಕೆ ಹಿಂದಿರುಗಿದಾಗ, ಅವನು ಫಿಲಿಪ್ಪಿಯವರ ಅನ್ಯೋನ್ಯತೆಯನ್ನು ಆನಂದಿಸಿದನು (ಫಿಲಿಪ್ಪಿ 2:23, 24). ಅವನು ಮೆಕೆದೋನ್ಯದಲ್ಲಿ ಪ್ರಯಾಣ ಮಾಡುವಾಗ, ಪ್ರಾಯಶಃ ತಿಮೊಥಿ ಹಾಗೂ ತೀತನ[9] ಪತ್ರಿಕೆಯನ್ನು ಬರೆದಿರಬಹುದು. ಈಗ ಪೌಲನು ಸುಮಾರು ಎಪ್ಪತ್ತು ವರ್ಷದವನಾಗಿರಬಹುದು, ಅವನ ನಂತರದ ಸೇವೆಗೆ ಯುವಕರನ್ನು ಸಿದ್ಧಪಡಿಸುತ್ತಿದ್ದನು.[10] ಪೌಲನು ಕೊರಿಂಥವನ್ನು ಸಂಧಿಸಿದ್ದರೂ (2 ತಿಮೊಥೆ 4:20), ಅವನು ಪಶ್ಚಿಮ ಗ್ರೀಸ್‌ನ ರೋಮಾಯದ ಒಂದು ಸಂಸ್ಥಾನವಾದ ನಿಕೋಪೊಲಿಯಲ್ಲಿ ಚಳಿಗಾಲವನ್ನು ಕಳೆಯಬೇಕೆಂದಿದ್ದನು (ತೀತ 3:12).

ಪೌಲನು, ಪ್ರವಾಸಮಾಡಿ ಸಾರುತ್ತಿದ್ದಾಗ, ರೋಮಾಯದಲ್ಲಿ ಕೆಲವು ಘಟನೆಗಳು

ಜರುಗುತ್ತಿದ್ದವು ನಂತರ ಅವುಗಳ ದೆಸೆಯಿಂದ ಪೌಲನು ಬಂಧಿತನಾಗಿ ಮರಣಕ್ಕೆ ಒಳಗಾದನು. ಕ್ರಿ.ಶ. 64 ಜುಲೈ 18ರಂದು, ಪ್ರಧಾನ ಪಟ್ಟಣವು ಬೆಂಕಿಗೆ ಅಹುತಿಯಾಯಿತು.

> ಬಡವರಿದ್ದ ಸ್ಥಳದಲ್ಲಿ ಬೆಂಕಿ ಹತ್ತಿಕೊಂಡು, ಅದರ ಜ್ವಾಲೆಯು ಒಂಬತ್ತು ದಿವಸಗಳ ಕಾಲ ಆವರಿಸಿತ್ತು. ಪಟ್ಟಣದ ಹದಿನಾಲ್ಕು ಭಾಗಗಳಲ್ಲಿ, ಹತ್ತು ಭಾಗಗಳು ಬೆಂಕಿಯಿಂದ ನಾಶವಾಯಿತು. ಅರಮನೆ, ದೇವಮಂದಿರಗಳು ಹಾಗೂ ವೇದಿಕೆಗಳು ಸುಟ್ಟು ಬೂದಿಯಾದವು. 200,000 ಜನರು ಸೇರಬಹುದಾದ ಸರ್ಕಸ್ ಸ್ಥಳವು ಸಹ ಸುಟ್ಟು ಹೋದವು.[11]

ಆ ಪಟ್ಟಣವು ಬೆಂಕಿಗೆ ಅಹುತಿಯಾದದ್ದಕ್ಕೆ, ಈ ದಿನದ ಚರಿತ್ರೆಕಾರರು ಸಹ ನೀರೋ ಚಕ್ರವರ್ತಿಯನ್ನು ನಿಂದಿಸುವದಿಲ್ಲ. ಬಹುಶಃ ಅದು ಆಕಸ್ಮಿಕವಾಗಿ ಸಂಭವಿಸಿರಬಹುದು. ಹೇಗೂ, ಕೋಪಗೊಂಡ ನಾಗರೀಕರು, ನೀರೋ ಪಟ್ಟಣವನ್ನು ಪುನಸ್ಥಾಪಿಸುವ ಯೋಜನೆಯನ್ನು ಅರಿತವರಾಗಿ, ಆ ಚಕ್ರವರ್ತಿಯನ್ನು ನಿಂದಿಸಿದರು. ಜನರ ಕೋಪವನ್ನು ನಿಗ್ರಹ ಮಾಡಲು, ಅವನು ಕ್ರೈಸ್ತರನ್ನು ಬಲಿಪಶುಮಾಡಿದನು. ನೀರೋ ಚಕ್ರವರ್ತಿಯ ಪ್ರತಿಕ್ರಿಯೆಯ ಕುರಿತು, ಟಕ್ಸಿಕನೆಂಬ ರೋಮಾದ ಇತಿಹಾಸಕಾರನು (ಕ್ರಿ.ಶ. 55-120) ತಿಳಿಸಿ:

> ಅವನ ಮೇಲಿದ್ದ ನಿಂದನೆಗಳನ್ನು ನಿಗ್ರಹಿಸಲು, ತನ್ನ ಜಾಗದಲ್ಲಿ ಕೆಲವು ಮೋಸಗಾರರನ್ನು ನೇಮಿಸಿಕೊಂಡನು. ಸಾಮಾನ್ಯ ಜನರು ಆ ವ್ಯಕ್ತಿಗಳನ್ನು ದ್ವೇಷಿಸುತ್ತಿದ್ದರು, ಅವರು ವನ್ಯ ಪ್ರಾಣಿಗಳ ಚರ್ಮವನ್ನು ಧರಿಸಿದವರಾಗಿ, ನಾಯಿಗಳಿಂದಲ, ಬೆಂಕಿಯಿಂದಲೂ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದರು. ರಾತ್ರಿಯ ಸಮಯದಲ್ಲಿ ಬೆಳಕಿಗಾಗಿ ಆ ಕ್ರೈಸ್ತರನ್ನು ಸುಡುತ್ತಿದ್ದರು. ನೀರೋ ಅದನ್ನು ಜನರು ನೋಡಲೆಂದು ತನ್ನ ತೋಟದಲ್ಲಿ ಹಮ್ಮಿಕೊಂಡಿದ್ದನು ...[12]

ನೀರೋ, ಕ್ರೈಸ್ತರ ತಲೆಗಳನ್ನು ಕತ್ತರಿಸಿದ್ದನು ಎಂದು ಟಕ್ಸಿಕನು ವರದಿ ನೀಡಿರುವನು, ಅವರನ್ನು ಸಿಂಹಗಳ ಆಹಾರವಾಗಿ, ನಿಲುವು ಕಂಬಗಳ ಮೇಲಿನಿಂದ ಬೀಳಿಸುತ್ತಿದ್ದನು.

ಹೀಗೆ ವಿಶ್ವಾಸಿಗಳಿಗೆ ಹಿಂಸೆಯು ಆರಂಭವಾಯಿತು. ಇದರಲ್ಲಿ ಪೌಲನೇ ಪ್ರಥಮ ಗುರಿಯಾಗಿರಬಹುದು. ಕ್ರಿ.ಶ. 67ರಲ್ಲಿ ಪೌಲನನ್ನು ಬಂಧಿಸಿರಬಹುದು, ಅವನನ್ನು ನಿಕೋಪೋಲಿಯದಿಂದ ರೋಮಾಯಕ್ಕೆ ಎಳೆದೊಯ್ದಿರಬಹುದು (ತೀತ 3:12), ಆ ಬಂಧನದ ಸಮಯದಲ್ಲಿ ಅವನು ತಾನೇ ಮಾಡಿಕೊಂಡ ಬಾಡಿಗೆ ಮನೆಯಲ್ಲಿ ಇಲ್ಲದೆ ಇರಬಹುದು (ಅಪೊಸ್ತಲ ಕೃತ್ಯಗಳು 28:30). ಆದಿ ಬರಹಗಾರರು ಹೇಳುವಂತೆ, ಒಬ್ಬನೆ ನಿಂತು ಕೊಳ್ಳಲು ಸಾಧ್ಯವಿರುವ ಕಲ್ಲಿನ ಕುಣಿಯಲ್ಲಿ ಅವನನ್ನು ಬಂಧಿಸಿರಬಹುದು, ಅದಕ್ಕೆ ಮೇಲಿನಿಂದ ಮಾತ್ರ ಬೆಳಕು ಚೆಲುತ್ತಿತ್ತು.

ಆ ಮಂದ ಬೆಳಕಿನಲ್ಲಿ, ಒಬ್ಬ ಅನಾಮಿಕ ಧರ್ಮಿಷ್ಟನಿಂದ ಚರ್ಮದ ಹಾಳೆಗಳನ್ನು ಮತ್ತು ಲೇಖನಯನ್ನು ಪಡೆದು/ಬಳಸಿ ಅವುಗಳನ್ನು ತನ್ನ ಪ್ರಿಯನಾದ ತಿಮೊಥಿಗೆ ಪತ್ರವನ್ನು ಬರೆದನು. ಅವನು ರೋಮಾಯದ ಹಕ್ಕುದಾರನಾಗಿದ್ದರಿಂದ, ಹಗಲಿನಲ್ಲಿ ನ್ಯಾಯಾಲಯದಲ್ಲಿರುತ್ತಿದ್ದನು, ಆದರೆ ಅವನ ಸ್ವಂತ ಜನರೇ ಅವನಿಗೆ ವಿರೋಧವಾಗಿ ಆರೋಪಗಳನ್ನು ಮಾಡಿದ ನಿಮಿತ್ತವಾಗಿ, ಎರಡನೆಯ ಸಾರಿ ಅವನಿಗೆ ಬಿಡುಗಡೆಯಾಗುವ ಸಂಭವವಿರಲಿಲ್ಲ (2 ತಿಮೊಥೆ 4:16).[13] ಅವನು ಮರಣವನ್ನು ಎದುರಿನೋಡುತ್ತಿದ್ದನು (4:6-8). ಆದ್ದರಿಂದ ಅವನು ಯುವಕನಾದ ಸೌವಾರ್ತಿಕನಿಗೆ:

> ನನ್ನ ಬಳಿಗೆ ಬೇಗ ಬರುವದಕ್ಕೆ ಪ್ರಯತ್ನಮಾಡು; ... ಯಾಕಂದರೆ ದೇಮನು ಇಹಲೋಕವನ್ನು ಪ್ರೀತಿಸಿ ನನ್ನನ್ನು ಬಿಟ್ಟು ಥೆಸಲೋನಿಕಕ್ಕೆ ಹೋದನು; ಕ್ರೆಸ್ಕನು ಗಾಲಾತ್ಯಕ್ಕೂ ತೀತನು ದಲ್ಮಾತ್ಯಕ್ಕೂ ಹೋದರು; ಲೂಕನು ಮಾತ್ರ ನನ್ನ ಜೊತೆಯಲ್ಲಿದ್ದಾನೆ. ಮಾರ್ಕನನ್ನು ಸಂಗಡ ಕರಕೊಂಡು ಬಾ, ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ. ತುಖಿಕನನ್ನು ಎಫೆಸಕ್ಕೆ ಕಳುಹಿಸಿದೆನು. ತ್ರೋವದಲ್ಲಿ ನಾನು ಕರ್ಪನ ಬಳಿಯಲ್ಲಿ ಬಿಟ್ಟುಬಂದ ಮೇಲಂಗಿಯನ್ನೂ ಪುಸ್ತಕಗಳನ್ನೂ ಮುಖ್ಯವಾಗಿ ಚರ್ಮದ ಕಾಗದಗಳನ್ನೂ ನೀನು ಬರುವಾಗ ತೆಗೆದುಕೊಂಡು ಬಾ (2 ತಿಮೊಥೆ 4:9-13).

> ಚಳಿಗಾಲಕ್ಕೆ ಮುಂಚೆಯೇ ಬರುವದಕ್ಕೆ ಪ್ರಯತ್ನಮಾಡು. ಯುಬೂಲನೂ ಪೂದೆಯನೂ ಲೀನನೂ ಕ್ಲೌದ್ಯಳೂ ಉಳಿದ ಸಹೋದರರೆಲ್ಲರೂ ನಿನಗೆ ವಂದನೆ ಹೇಳಿದ್ದಾರೆ (2 ತಿಮೊಥೆ 4:21ಎ).

ಚಳಿಗಾಲದ ಪ್ರಯಾಣವು ಕಷ್ಟಕರವಾಗಿತ್ತು, ಮುಂದಿನ ವಸಂತಕಾಲದ ಸಮಯಕ್ಕೆ ಪೌಲನು ಜೀವದಿಂದ ಇರುವದಿಲ್ಲ ಎಂದು ಅರಿತ್ತಿದ್ದನು.

ಪ್ರೇರಿತವಲ್ಲದ ಸಂಪ್ರದಾಯದ ಪ್ರಕಾರ, [14] ಕ್ರಿ.ಶ. 67/68ರಲ್ಲಿ ಪೌಲನ ತಲೆಯನ್ನು ಕತ್ತರಿಸಲಾಯಿತು, ಕತ್ತರಿಸುವವನು ಪೌಲನ ತಲೆಯನ್ನು ಅವನ ದೇಹದಿಂದ ಬೇರ್ಪಡಿಸಿದಾಗ, ಅಪೊಸ್ತಲನ ಆತ್ಮವು ಅಂತಿಮವಾಗಿ ಅವನ ಕರ್ತನ ಬಳಿಗೆ ಹೋಯಿತು (ಫಿಲಿಪ್ಪಿ 1:23), ನಾವು ಅವನಿಗೆ ಅಂತಿಮ ನಮನವನ್ನು ಸಲ್ಲಿಸುವಾಗ, [15] ಈ ವಾಕ್ಯಗಳು ನಮಗೆ ಅಂಟಿಕೊಳ್ಳುತ್ತವೆ:

> ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾಕಥೆಗಳನ್ನು ಕೇಳುವದಕ್ಕೆ ಹೋಗುವರು. ಆದರೆ ನೀನು ಎಲ್ಲಾ ವಿಷಯಗಳಲ್ಲಿ ಸ್ವಸ್ಥಚಿತ್ತನಾಗಿರು, ಶ್ರಮೆಯನ್ನು ತಾಳಿಕೋ, ಸೌವಾರ್ತಿಕನ ಕೆಲಸವನ್ನು ಮಾಡು, ನಿನಗೆ, ನೇಮಿಸಿರುವ ಸೇವೆಯನ್ನು ಲೋಪವಿಲ್ಲದೆ ನಡಿಸು. ಯಾಕಂದರೆ ನಾನಂತೂ ಈಗಲೇ ಪಾನದ್ರವ್ಯವಾಗಿ ಅರ್ಪಿತನಾಗುತ್ತಾ ಇದ್ದೇನೆ; ನಾನು ಹೊರಟು ಹೋಗಬೇಕಾದ ಸಮಯವು ಸಮೀಪಕ್ಕೆ ಬಂದದೆ. ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ, ನನ್ನ ಓಟವನ್ನು ಕಡೆಗಾಣಿಸಿದ್ದೇನೆ, ಕ್ರಿಸ್ತ ನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ; ನೀತಿವಂತರಿಗೆ ದೊರಕುವ ಜಯಮಾಲೆಯು ಮುಂದೆ ನನಗೆ ಸಿದ್ಧವಾಗಿದೆ; ಆದನ್ನು ನೀತಿಯುಳ್ಳನ್ಯಾಯಾಧಿಪತಿಯಾಗಿರುವ ಕರ್ತನು ಆ ದಿನದಲ್ಲಿ ನನಗೆ ಕೊಡುವನು; ನನಗೆ ಮಾತ್ರವಲ್ಲದೆ ತನ್ನ ಪ್ರತ್ಯಕ್ಷತೆಯನ್ನು ಪ್ರೀತಿಸುವವರೆಲ್ಲರಿಗೂ ಕೊಡುವನು (2 ತಿಮೊಥೆ 4:6-8).

## ಮೊದಲ ಶತಮಾನದ ಕ್ರೈಸ್ತರಲ್ಲಿ ಮುಂದುವರಿದ ಅಪೊಸ್ತಲರ ಕೃತ್ಯಗಳು

ಅಪೊಸ್ತಲರ ಕೃತ್ಯಗಳು ಪುಸ್ತಕದ ಇತರೆ ಕ್ರೈಸ್ತರು ಸ್ಥಬ್ದರಾಗಿದ್ದರು ಎಂಬ ಅರ್ಥವಲ್ಲ. ಪೇತ್ರ ಮತ್ತು ಇತರೆ ಅಪೊಸ್ತಲರು ಯೇಸುವಿನ ಕುರಿತು ಸಾರುತ್ತಾ ಪ್ರಯಾಣ ಮಾಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 9:32) ಪ್ರೇರಿತವಲ್ಲದ ಸಂಪ್ರದಾಯದ ಪ್ರಕಾರ, ಅಪೊಸ್ತಲನು ನಾಗರೀಕತೆಯಲ್ಲಿ ವೃದ್ಧಿ ಹೊಂದಿದ್ದ ಪ್ರದೇಶಗಳಿಗೆ ಸುವಾರ್ತೆಯನ್ನು ತಲುಪಿಸಿದನು. ಅದು ದೇವರ ಮಹಾ ಆ ದೇಶದ ಮೇರೆಗೆ ಅನುಗುಣವಾಗಿತ್ತು (ಮತ್ತಾಯ 28:18-20; ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 1:8) ಮತ್ತು ಕೊಲೊಸ್ಸೆಯವರಿಗೆ ಪೌಲನು ತಿಳಿಸಿದ ಹೇಳಿಕೆಯ ಪ್ರಕಾರ, "... ನೀವು ದೇವರ ಕೃಪೆಯನ್ನು ಕುರಿತು ಸತ್ಯಾರ್ಥವನ್ನು ಕೇಳಿ ತಿಳುಕೊಂಡ ದಿವಸದಿಂದ ಆ ಸುವಾರ್ತೆಯು ನಿಮ್ಮಲ್ಲಿ ಫಲಕೊಟ್ಟು ವೃದ್ಧಿಯಾಗುತ್ತಾ ಬಂದ *ಪ್ರಕಾರ ಲೋಕದಲ್ಲೆಲ್ಲಾ* ಹಬ್ಬಿ ಫಲಕೊಟ್ಟು ವೃದ್ಧಿಯಾಗುತ್ತಾ ಬರುತ್ತದೆ ..." (ಕೊಲೊಸ್ಸೆ

1:5, 6; ಒತ್ತಿ ಹೇಳಿದ್ದು ನನ್ನದು).[16]

ಆದಿ ಕ್ರೈಸ್ತರ ಪ್ರಕಾರ ಅಪೊಸ್ತಲನಾದ ಯೋಹಾನನು, ತನ್ನ ಅಂತಿಮ ದಿವಸದ ಬಹು ದಿನಗಳನ್ನು ಎಫೆಸದಲ್ಲಿ ಕಳೆದಿದ್ದನು. ಪೇತ್ರನು ಅಂತಿಯೋಕ್ಯದವರೆಗೂ ಪ್ರಯಾಣಿಸಿದನು ಎಂಬುದನ್ನು ನಾವು ಅರಿತಿರುವೆವು (ಗಲಾತ್ಯ 2:11) ಬಾಬಿಲೋನಿಗೂ ಹೋಗಿದ್ದನು (1 ಪೇತ್ರ 5:13).[17] ಅಪೊಸ್ತಲರಲ್ಲದವರೂ ಸಹ ಶುಭ ಸಮಾಚಾರವನ್ನು ತಿಳಿಸುತ್ತಿದ್ದರು (ಅಪೊಸ್ತಲರ ಕೃತ್ಯಗಳು 11:19). ಅಪೊಲ್ಲೋಸನಂತ ಪ್ರಸಂಗಿಗಳು ಸಹ ಕ್ರಿಯಾಶೀಲರಾಗಿದ್ದರು (1 ಕೊರಿಂಥ 16:12; ತೀತ 3:13). ಒಂದು ಪ್ರಯಾಣದಲ್ಲಿ ಪೌಲನ ಇಬ್ಬರು ಸಹಚರರಾದ, ಸೀಲ ಮತ್ತು ಮಾರ್ಕರು, ಪೇತ್ರನೊಂದಿಗೆ ಇದ್ದರು (1 ಪೇತ್ರ 5:12 13).

ಪೌಲನಂತೆ, ಪವಿತ್ರಾತ್ಮ ಪ್ರೇರಿತರಾದವರು, ಕ್ರೈಸ್ತರನ್ನು ನಂಬಿಕೆಯಲ್ಲಿ ಭಲಪಡಿಸುವದಕ್ಕಾಗಿ ಬರವಣಿಗೆಗಳನ್ನು ಮಾಡಿದರು. ಕ್ರಿ.ಶ. 60ರಲ್ಲಿ ಲೂಕನು ಸುವಾರ್ತೆಯನ್ನು ಹಾಗೂ ಅಪೊಸ್ತಲರ ಕೃತ್ಯವನ್ನು ಬರೆದನು. ಅದೇ ಸಮಯದಲ್ಲಿ, ಯೇಸು ಕ್ರಿಸ್ತನ ಕುರಿತು ಮತ್ತಾಯ ಮತ್ತು ಮಾರ್ಕರು ಸುವಾರ್ತೆಯನ್ನು ಬರೆದರು. ಪೌಲನಂತೆ ಪ್ರೇರಿತರಾದ ಸಭಾನಾಯಕರುಗಳು ಸಭೆಗಳಿಗೆ ಪತ್ರಗಳನ್ನು ಬರೆಯುತ್ತಿದ್ದರು: ಯೇಸುವಿನ, ಸಹೋದರನಾದ ಯಾಕೋಬನು ಕ್ರಿಯಾಶೀಲನಾದ ಕ್ರೈಸ್ತ ಜೀವಿತದ ಕುರಿತು ಯೆಹೂದ್ಯರಿಗೆ ಬರೆದನು, ಯೇಸುವಿನ ಇನ್ನೊಬ್ಬ ಸಹೋದರನಾದ ಯೂದನು, "... ನಂಬಿಕೆಗಾಗಿ ತವಕಗೊಳ್ಳಬೇಕೆಂದು ..." ಕ್ರೈಸ್ತರಿಗೆ ಎಚ್ಚರಿಕೆಯ ಪತ್ರವನ್ನು ಬರೆದನು (ಯೂದ 3). ಪೇತ್ರನು ಮರಣಕ್ಕೆ ಸಮೀಪವಾಗಿರುವಾಗ (2 ಪೇತ್ರ 1:13-15) ಎರಡು ಪತ್ರಿಕೆಗಳನ್ನು: ಗೌರವದಿಂದ ಹಿಂಸೆಯನ್ನು ತಾಳಿಕೊಳ್ಳುವ ಕುರಿತು, ಸುಳ್ಳು ಬೋಧನೆಯ[18] ಕುರಿತು ಎರಡನೇ ಪತ್ರಿಕೆಯನ್ನು ಪೇತ್ರನು ಬರೆದನು - ಯಾಕೋಬ, 1 ಮತ್ತು 2 ಪೇತ್ರ ಹಾಗೂ ಯೂದ ಎಂಬ ನಾಲ್ಕು ಪತ್ರಿಕೆಗಳು ಕ್ರಿ.ಶ. 60ರಲ್ಲಿ[19] ಬರೆದಿರಬಹುದು.

ಮೊದಲನೆಯ ಶತಮಾನದ ಅಂತ್ಯದಲ್ಲಿ, ಅಪೊಸ್ತಲನಾದ ಯೋಹಾನನು, ಅಲ್ಲಿ ಉದ್ಭವಿಸಿದ ಸಮಸ್ಯೆಗಳ ಕುರಿತು ಐದು ಪುಸ್ತಕಗಳನ್ನು ಬರೆದಿರುವನು. ಕ್ರಿಸ್ತನು "ಮಾಂಸಧಾರಿಯಾಗಿ" ಬರಲಿಲ್ಲ ಎಂಬ ತತ್ವಕ್ಕೆ ವಿರೋಧವಾಗಿ ಅವನು ಸುವಾರ್ತೆಯನ್ನು ಬರೆದನು (ಯೋಹಾನ 1:1, 14; ನೋಡಿರಿ 2 ಯೋಹಾನ 7). ತಪ್ಪು ಸಿದ್ಧಾಂತಗಳಿಂದ ಉಂಟಾಗುವ ಪರಿಣಾಮಗಳ ಕುರಿತು, ಮೊದಲ ಪತ್ರಿಕೆಯನ್ನು ಬರೆದನು (1 ಯೋಹಾನ 1:1; 2:1). ತಪ್ಪು ಸಿದ್ಧಾಂತಗಳನ್ನು ಉತ್ತೇಜಿಸುತ್ತಿದ್ದ ಜನರಿಗೆ ತಿಳುವಳಿಕೆ ನೀಡಲು ಎರಡನೇ ಪತ್ರಿಕೆಯನ್ನು ಬರೆದನು (2 ಯೋಹಾನ 7-11). ಅಂತ್ಯದಲ್ಲಿ ಯೋಹಾನನು ಹೊಸ ಒಡಂಬಡಿಕೆಯ ಕೊನೇಯ ಪುಸ್ತಕವನ್ನು, ದೇವರ ಪ್ರಧಾನ ಕಾರ್ಯದರ್ಶಿಯಾಗಿ ಬರೆದನು (ಪ್ರಕಟನೆ 1:1, 9-11). ಹಿಂಸೆಗೊಳಗಾದ ಕ್ರೈಸ್ತರನ್ನು ಪ್ರೋತ್ಸಾಹಿಸುವ ಸಲುವಾಗಿ, ಅಂತಿಮವಾದ ಪುಸ್ತಕ ಪ್ರಕಟನೆಯನ್ನು ಬರೆದನು (ಪ್ರಕಟನೆ 2:10).

ಆರಂಭದಿಂದಲೇ, ಸಭೆಯು ಹಿಂಸೆಗೆ ಒಳಗಾಗಿತ್ತು. ನಂಬಿಕೆಗೋಸ್ಕರವಾಗಿ, ಪೌಲನೊಂದಿಗೆ ಇತರರೂ ಸಹ ಅಸುನೀಗಿದ್ದರು, ಮೊದಲ ಅರ್ಧ ದಶಕದಲ್ಲಿ ಸಭೆಯು ಯೆಹೂದ್ಯರಿಂದ ಹಿಂಸೆಗೆ ಒಳಗಾಗಿತ್ತು. ಯೆಹೂದ್ಯ ಹಿರೀ ಸಭೆಯವರು ಸ್ತೆಫನನನ್ನು ಕಲ್ಲೆಸೆದು ಕೊಂದು ಹಾಕಿದರು. ಎಂದು ಅಧ್ಯಯನ ಮಾಡಿದ್ದೇವೆ; ಪೌಲನು ಕ್ರೈಸ್ತ ಸಭೆಯನ್ನು ಹಿಂಸಿಸುವಾಗ, ಸ್ತ್ರೀ ಪುರುಷರನ್ನು ಕೊಲ್ಲಲಾಯಿತು; ಅರಸನಾದ ಹೆರೋದನು ಯಾಕೋಬನ ತಲೆಯನ್ನು ತುಂಡರಿಸಿದನು (ಅಪೊಸ್ತಲರ ಕೃತ್ಯಗಳು 7:58-60; 22:4; 26:10; 12:2). ಪ್ರೇರಿತವಲ್ಲದ ಹೇಳಿಕೆಯ ಪ್ರಕಾರ, ಯೇಸುವಿನ ಸಹೋದರನಾದ ಯಾಕೋಬನ ತಲೆಯನ್ನು ಯೆಹೂದ್ಯರೇ ತುಂಡರಿಸಿದರು:

> ಅಂತಿಮವಾಗಿ ಅವನು ಶ್ರೀಮಂತರ ಕೋಪಕ್ಕೆ ತುತ್ತಾದನು, ಅವರು ಭ್ರಷರಾದ

> ಯೆರೂಸಲೇಮಿನ ಯೆಹೂದ್ಯರಾಗಿದ್ದರು. ಅವನು ಧರ್ಮಶಾಸ್ತ್ರವನ್ನು ಉಲಂಘಿಸಿದನು ಎಂಬ ಕಾರಣವನ್ನು ನೀಡಿ, ಅವನನ್ನು ದೇವಾಲಯದ ತುದಿಯಿಂದ ತಳ್ಳಿ, ಕಲ್ಲಿನಿಂದ ಹೊಡೆದು ನಂತರ ಕೋಲಿನಿಂದ ಹೊಡೆದು ಅವನ ಪ್ರಾಣವನ್ನು ತೆಗೆದರು, ಆಗಲೂ ಸಹ ಅವನು, ತನ್ನ ವಿರೋಧಿಗಳಿಗಾಗಿ ಪ್ರಾರ್ಥಿಸುತ್ತಿದ್ದನು.[20]

ಕ್ರಿ.ಶ. 64/65ರಲ್ಲಿ, ನೀರೋ ಚಕ್ರವರ್ತಿಯಿಂದ ಆರಂಭವಾದ ಹಿಂಸೆಯು, ರೋಮಾಯರು ಸಭೆಗೆ ನೀಡಿದ ಹಿಂಸೆಯಾಗಿ ಪರಿವರ್ತನೆಗೊಂಡಿತು.[21] ನೀರೋನ ಸಮಯದಲ್ಲಿಯೇ ಪೇತ್ರನು ಅಲ್ಲಿ ಉಂಟಾದ ಹಿಂಸೆಯ ಕುರಿತು ಬರೆದನು. ಪ್ರೇರಿತವಲ್ಲದ ಸಂಪ್ರದಾಯದ ಹೇಳಿಕೆಯ ಪ್ರಕಾರ, ಈ ಹಿಂಸೆಯ ಅವಧಿಯಲ್ಲಿ ಅನೇಕ ಅಪೊಸ್ತಲರು ಮರಣ ಹೊಂದಿದ್ದರು. ಇತರೆ ಅಪೊಸ್ತಲರ ಮರಣದ ಕುರಿತು ಅಪೊಸ್ತಲರ ಕೃತ್ಯಗಳು ಅಧ್ಯಯನದಲ್ಲಿ ತಿಳಿದಿರುವೆವು. ಪೇತ್ರನ ಮರಣದ ಕುರಿತು ಉತ್ತಮವಾದ ಸಂಪ್ರದಾಯದ ಹೇಳಿಕೆಯಿದೆ, ಅವನ ಕಣ್ಣುಗಳನ್ನು ಕಿತ್ತು, ಶಿಲುಬೆಯ ಮರಣವನ್ನು ಅವನಿಗೆ ನೀಡಿದರು. ಆ ಕಥೆಯ ಪ್ರಕಾರ, ಪೇತ್ರನು ಕ್ರಿಸ್ತನ ಹಾಗೆ ಮರಣ ಹೊಂದುವದು ಯೋಗ್ಯವಲ್ಲವೆಂದು, ತನನ್ನು ತಲೆಕೆಳಗಾಗಿ ಶಿಲುಬೆಗೆ ಹಾಕಲು ಮನವಿಮಾಡಿಕೊಂಡನು.

ಮೊದಲನೆಯದಾಗಿ, ಕ್ರೈಸ್ತರು ಎಂಬ ಕಾರಣಕ್ಕಾಗಿ ಕ್ರೈಸ್ತರನ್ನು ಹಿಂಸಿಸದೆ, ಇತರೆ ಕಾರಣಗಳನ್ನು ನೀಡಿ ಅವರನ್ನು ಹಿಂಸಿಸಿದರು. ಪಟ್ಟಣದಲ್ಲಿ ಬಿದ್ದ ಬೆಂಕಿಗೆ ಇವರೇ ಕಾರಣರೆಂದು ಭಾವಿಸಿದರೂ, ಅವರನ್ನು ರಾಜದ್ರೋಹ ಮಾಡಿದರೆಂದು, ಮಾಟಗಾರರೆಂದು ಹಾದರಗಾರರೆಂದು, ಹಾಗೂ ಮನುಷ್ಯರನ್ನು ತಿನ್ನುವರೆಂಬ ಅರೋಪವನ್ನು ಮಾಡಿ ಅವರನ್ನು ಹಿಂಸಿದರು.[22] ಕ್ರೈಸ್ತರು ಇತರ ಧರ್ಮವನ್ನು ಹಾಗೂ ಇತರೆ ದೇವತೆಗಳನ್ನು ದ್ವೇಷಿಸುವವರು ಎಂಬ ಕಾರಣವನ್ನು ನೀಡಿ, ಸಮಾಜದ ಜನರ ಹೃದಯಗಳಲ್ಲಿ ಅಸೂಯೆಯು ಉದ್ಭವಿಸಿತ್ತು: "ಯೇಸುವಿನ ಅನುಯಾಯಿಗಳಿಗೆ 'ಅನಾಸ್ತಿಕರು' ಮತ್ತು ಮನುಷ್ಯರನ್ನು ದ್ವೇಷಿಸುವರೆಂಬ ಪಟ್ಟವನ್ನು ನೀಡಿದರು" ಅತಿ ಶೀಘ್ರದಲ್ಲಿಯೇ, ಅಲ್ಲಿ ನಡೆಯುವ ಸಕಲ ಘಟನೆಗಳಿಗೂ ಕ್ರೈಸ್ತರೇ ಕಾರಣರೆಂದು ತಿಳಿದರು, ಅವರ ಈ ತೀರ್ಮಾನಕ್ಕೆ ಯಾವುದೇ ಸಾಕ್ಷ್ಯಾಧಾರಗಳಿರಲಿಲ್ಲ:

> [ನೀರೋ ನೀಡಿದ ಹಿಂಸೆಯನ್ನು] ಕ್ರೈಸ್ತರನ್ನು ಒಂದು ವಿಚಾರಣೆಗೆ ಒಳಪಡಿಸ ಬೇಕಿತ್ತು, ಅವರ ಮೇಲೆ ಮಾಡಿದ ಅಪಾಧನೆಗಳ ಪರಿಣಾಮವಾಗಿ, ಅವರು ಮನುಷ್ಯರನ್ನು *ದ್ವೇಷಿಸುವರೆಂಬ ತೀರ್ಮಾನ ಮಾಡಿದರು.* ಈ ಕಾರಣದಿಂದ ಅವರ ಧರ್ಮವೇ ಅಧರ್ಮವಾಗಿರುವದರಿಂದ, ನ್ಯಾಯಯುತವಾದ ವಿಚಾರಣೆಯನ್ನು ಮಾಡಲಿಲ್ಲ ...[23]

ದೋಮಿತನು, ಅಂದರೆ ರೋಮಾಯದ ಆಡಳಿತಗಾರನು ಕ್ರೈಸ್ತರ ಮೇಲೆ ಎರಡನೆಯ ಅಪವಾದವನ್ನು ಮಾಡಿದನು:[24]

> ಇಡೀ ಸಾಮ್ರಾಜ್ಯವನ್ನು ಕ್ರೈಸ್ತರ ರಕ್ತದಿಂದ ಮುಳುಗಿಸಿದ ವಿಚಾರಕ್ಕೆ ದೋಮಿತೀಯನು ಕಾರಣವಾಗಿದ್ದನು (ಹೊಲಿಸು 81-96) ಎಂದು ಇತಿಹಾಸದಲ್ಲಿ ದಾಖಲು ಮಾಡಲಾಗಿದೆ. ಅವನು ಚಕ್ರವರ್ತಿಯನ್ನೆ ಅವರು ಆರಾಧಿಸಬೇಕೆಂಬ ಉದ್ದೇಶವನ್ನು ಹೊಂದಿದ್ದನು ...
>
> ದೋಮಿತಿಯನ ಮಹಾ ಪರಾಕ್ರಮದ ನಿಮಿತ್ತ ಕ್ರೈಸ್ತರು ಸಾವು ಮರಣಗಳ ನಡುವೆ ಹೋರಾಟ ಮಾಡಬೇಕಾಯಿತು. ಅವನು ಕೆಲವರನ್ನು ಸಾಯಿಸಿದನು, ಕೆಲವರನ್ನು ಓಡಿಸಲಾಯಿತು, ಕೆಲವರಿಗೆ ಚಕ್ರವರ್ತಿಯ ನಾಮವನ್ನು ಅರಿಕೆ ಮಾಡಬೇಕೆಂಬುದಾಗಿ ಒತ್ತಾಯ ಪಡಿಸಲಾಯಿತು, ಕೆಲವರ ಆಸ್ತಿಯನ್ನು ಕಿತ್ತುಕೊಂಡರು, ಇನ್ನೂ ಕೆಲವರು ಈ ಎಲ್ಲಾ ಹಿಂಸೆಗಳನ್ನು ಅನುಭವಿಸಿದರು.[25]

ದೋಮೀತನ ಆಡಳಿತದ ಕಡೇಯ ಅವಧಿಯಲ್ಲಿ ಪ್ರಕಟನೆ ಗ್ರಂಥವನ್ನು ಬರೆದಿರಬಹುದು (ಕ್ರಿ.ಶ. 94-96). ಅಧ್ಯಾಯ 2ರಲ್ಲಿ "ಕ್ರೈಸ್ತರು ಸಾಯುವಾಗಲೂ ನಂಬಿಗಸ್ತರಾಗಿರಬೇಕೆಂಬ" ಮನವಿಯನ್ನು ಮಾಡಲಾಗಿದೆ (ವಚನ 10; NCV) ಮತ್ತು "ನನ್ನ ನಂಬಿಗಸ್ತನಾದ ಅಂತಿಪನು ಪೆರ್ಗಮದಲ್ಲಿ ಕೊಲ್ಲಲ್ಪಟ್ಟನು" [ರಕ್ತಸಾಕ್ಷಿ] (ವಚನ 13). ಅಧ್ಯಾಯ 6ರಲ್ಲಿ "ವಾಕ್ಯಕ್ಕೋಸ್ಕರ ವಾಗಿ ಮರಣಹೊಂದಿದ ಇತರರ ಕುರಿತೂ ಬರೆಯಲಾಗಿದೆ" (ವಚನ 9). ಅಧ್ಯಾಯ 17ರಲ್ಲಿ "ಬಾಬೇಲೆಂಬ ಜಾರಸ್ತ್ರೀಯು, ದೇವ ಜನರ ಹಾಗೂ ರಕ್ತಸಾಕ್ಷಿಗಳ ರಕ್ತವನ್ನು ಕುಡಿದಳು" ಎಂದು ತಿಳಿಸುತ್ತದೆ (ವಚನಗಳು 1-6). (ಆ ಜಾರಸ್ತ್ರೀಯ ಸಪ್ತ ಬೆಟ್ಟಗಳ ಮೇಲೆ ಕುಳಿತ್ತಿದ್ದರಿಂದ [ವಚನ 9] ಅವಳನ್ನು ಏಳು ಬೆಟ್ಟಗಳ ಮೇಲೆ ಇದ್ದ ರೋಮಾಯಕ್ಕೆ ಹೋಲಿಸಬಹುದು.)

ಕೆಲವು ಅಭಿಪ್ರಾಯದ ಮೇರೆಗೆ, ದೋಮೀತೀಯನ ಆಡಳಿತ ಹಿಂಸೆಯ ಕಾಲದಲ್ಲಿ, ಪೌಲನ ಸ್ನೇಹಿತನಾದ ತಿಮೊಥೆಯನು ಕೊಲ್ಲಲ್ಪಟ್ಟನು ಎಂಬ ಹೇಳಿಕೆಯಿದೆ.[26] ಈ ಹಿಂಸೆಯ ಸಮಯದಲ್ಲಿ ಬದುಕುಳಿದ ಅಪೊಸ್ತಲರಲ್ಲಿ ಒಬ್ಬನಾದ ಅಪೊಸ್ತಲ ಯೋಹಾನನನ್ನು ಪತ್ಮೋಸ್ ದ್ವೀಪಕ್ಕೆ ಸಾಗ ಹಾಕಿದರು, ಅಲ್ಲಿ ಅವನು "ಯೇಸು ಕ್ರಿಸ್ತನ ಪ್ರಕಟನೆಯನ್ನು ಸ್ವೀಕರಿಸಿದನು" (ಪ್ರಕಟನೆ 1:1, 9).[27]

ರೋಮಾಯರ ಈ ಕ್ರೂರತನ ಕ್ರೈಸ್ತರ ಆಸಕ್ತಿಯನ್ನು ಕುಂದಿಸಿತೇ? ದೇವ ಮಕ್ಕಳ ಕ್ರಿಯೆಗಳು ನಿಂತು ಹೋದವೇ? ರೋಮಾಯರ ಈ ಕ್ರೂರ ಹಿಂಸೆಯ ಪರಿಣಾಮದ ಕುರಿತು, ಎರಡನೇ ಶತಮಾನದ ಬರವಣಿಗೆ ಕಾರನಾದ ತೆರ್ತುಲನು ಬರೆದು:

> ನಾವುಗಳು ನೆನ್ನೆಯ ದಿವಸದ ಜನರಾದರೂ, ನಿಮಗೆ ಸೇರಿದ ಸ್ಥಳಗಳನ್ನು ಆಕ್ರಮಿಸಿ ಕೊಂಡಿರುವೆವು. ನಿಮ್ಮ ಪಟ್ಟಣಗಳನ್ನು ದ್ವೀಪಗಳನ್ನು, ಅರಮನೆಗಳನ್ನು, ಸಭಾಂಗಣಗಳನ್ನು ವೇದಿಕೆಗಳನ್ನು ಕುಲಗಳನ್ನು ಆವರಿಸಿರುವೆವು. ನೀವು ಎಷ್ಟೇ ಕ್ರೂರತನದಿಂದ ವರ್ತಿಸಿದರೂ, ನಮ್ಮ ಶಾಲೆಯು ನಿಮ್ಮವರನ್ನು ಗೆದ್ದು ಕೊಳ್ಳುತ್ತದೆ, ನಾವು ನಮ್ಮನ್ನು ಹೀನೈಸಿದರೂ, ನಾವು ಮೇಲುಗೈ ಸಾಧಿಸಿರುವೆವು. ಅದಕ್ಕೆ ರಕ್ತಸಾಕ್ಷಿಗಳ ರಕ್ತವೇ ಬೀಜವಾಗಿರುತ್ತದೆ [ಕ್ರೈಸ್ತರ].[28]

## ಕಾಲಾಂತರದಿಂದಲೂ ಮುಂದುವರಿದ ಕ್ರೈಸ್ತರಲ್ಲಿನ ಅಪೊಸ್ತಲರ ಕೃತ್ಯಗಳು

ಎರಡು ಮತ್ತು ಮೂರನೆಯ ಶತಮಾನದಲ್ಲಿ ಕ್ರೈಸ್ತ ರಕ್ತಸಾಕ್ಷಿಗಳ ರಕ್ತವು ರೋಮಾ ಸಾಮ್ರಾಜ್ಯದಲ್ಲಿ ಧಾರಾಳವಾಗಿ ಹರಿಯಿತು. *"ಫಾಕ್ಸಸ್ ಬುಕ್ ಆಫ್ ಮಾರ್ಟಿರ್ಸ್"* ಎಂಬ ಪುಸ್ತಕದಲ್ಲಿ, ಜಾನ್ ಫಾಕ್ಸ್‌ರವರು, ರೋಮಾ ಚಕ್ರವರ್ತಿಯು ನೀಡಿದ ಹಿಂಸೆಗಳ ಬಗ್ಗೆ ಹತ್ತು ಬಗೆಯ ಹಿಂಸೆಗಳನ್ನು ವ್ಯಾಖ್ಯಾನಿಸಿರುವರು.[29] ಚಕ್ರವರ್ತಿಯಾದ ಟ್ರಾಜನ್, ಇಗ್ನೇಷಿಯಸ್‌ನ[30] ಆಡಳಿತಾವಧಿಯಲ್ಲಿ ಯೋಹಾನನ ಒಬ್ಬ ಶಿಷ್ಯನನ್ನು ಕರೆತರಲು, ಆ ಸ್ಥಳದಲ್ಲಿದ್ದ ಮೂರು ವನ್ಯ ಮೃಗಗಳು ಅವನನ್ನು ತಿಂದು ಹಾಕಿದವು. ಮಾರ್ಕಸ್ ಅರು ಲೂಯಿಕ ಆಡಳಿತಾವಧಿಯಲ್ಲಿ, ಮತ್ತೊಬ್ಬ ಯೋಹಾನನ ಶಿಷ್ಯನನ್ನು ರೋಮಾಯಕ್ಕೆ ಕರೆತಂದಾಗ, ಅವನನ್ನು ಕೊಲ್ಲುವ ಮೊದಲು, ಕ್ರಿಸ್ತನನ್ನು ತೆಗಳುವಂತೆ ಪ್ರಚೋದಿಸಲಾಯಿತು.[31] ಆಗ ಅವನು ಉತ್ತರಿಸಿ, "ಎಂಬತ್ತ - ಆರು ವರ್ಷಗಳ ಕಾಲ ನಾನು ಆತನನ್ನು ಸೇವಿಸಿರುವೆನು, ಮತ್ತು ಆತನು ನನಗೆ ಯಾವ ಅಪಾಯವನ್ನು ಉಂಟುಮಾಡಲಿಲ್ಲ: ಆ ನನ್ನ ಅರಸನನ್ನೂ ಕರ್ತನನ್ನೂ ನಾನು ಹೇಗೆ ನಾನು ದೂಷಿಸಲಿ? ಅಂದನು."[32] ಅದೇ ಸಮಯದಲ್ಲಿ, ಸಾಕ್ಷಿಯ ನಿಮಿತ್ತ ಜಸ್ಟಿನ್ ಮಾರ್ಟಿನ್ ಸಹ[33] ಕೊಲ್ಲಲ್ಪಟ್ಟನು. ಅದೇ ಹಿಂಸೆಯ ಕಾಲದಲ್ಲಿ ಸವೇರಸನು ಆಳುವಾಗ, ಲಯನ್ಸ್‌ನ ಇರೇನಿಯಸ್ ಎಂಬ ಪ್ರಮುಖನು ಹತ್ಯೆಗೀಡಾದನು. ಮಕ್ಸಿಮಸ್, ಡೇಸಿಯಸ್ ವೆಲೇ ರಿಯನ್ ಹಾಗೂ, ಮಕ್ಸಿಮೀಯನ ಕಾಲದಲ್ಲೂ ಹಿಂಸೆಯು ಉಂಟಾಯಿತು ಎಂದು ಫಾಕ್ಸ್ ತಿಳಿಸಿರುವರು.

ಸಭೆ ಸ್ಥಾಪನೆಗೊಂಡ ಅಧಿಯಲ್ಲಿ ಜರುಗಿದ ಕ್ರೈಸ್ತರ ಹಿಂಸೆಯ ಕುರಿತು ಬರೆಯಲು ಹೆಚ್ಚು ಸ್ಥಳಾವಕಾಶವನ್ನು ನಾನು ಬಯಸುತ್ತೇನೆ: ಅಫ್ರಿಕದ ಯುವತಿಯಾದ ತಾಯಿ ಪೆರೆಪೆಚುವಾಳ ಬಗ್ಗೆ ಹೇಳಬಹುದು, ಆಕೆ ಆಸಮಯದಲ್ಲಿಯೇ ಹತ್ಯೆಗೊಳಗಾದಳು; ಹಾಗೂ 6, 666 ಸಂಖ್ಯೆಯಲ್ಲಿದ್ದ ಕ್ರೈಸ್ತ ಸಿಪಾಯಿಗಳು, ಗೌಲ್‌ನಲ್ಲಿ ಕ್ರೈಸ್ತರನ್ನು ಹೊರಹಾಕಬೇಕೆಂಬ ಅದೇಶವನ್ನು ಉಲ್ಲಂಘಿಸಿದ್ದರಿಂದ, ಇತರೆ ಸೈನಿಕರು ಅವರನ್ನು ಕತ್ತಿಯಿಂದ ಚೂರು ಚೂರು ಮಾಡಿದರು; ಬ್ರಿಟೀಷ್ ರಕ್ತಸಾಕ್ಷಿಯಾದ, ಅಲ್ಬಾನನ ಮುಂದೆ ಮತ್ತೊಬ್ಬ ರಕ್ತ ಸಾಕ್ಷಿಯನ್ನು ಕೊಂದು ಹಾಕಿದಾಗ, ಅವನಿಗೆ ಅಲ್ಬನನ ಧೈರ್ಯದ ಪ್ರೋತ್ಸಾಹವು ಉಂಟಾಗಿತ್ತು - ಇನ್ನೂ ಇತರರು ಇರುವರು.

ಮತ್ತೆ ನಾನು ಹೇಳುತ್ತೇನೆ: ಈ ವಿಧವಾದ ಹಿಂಸೆಯು ಸಭೆಯನ್ನು ವಿನಾಶ ಮಾಡಿತೇ? ದೇವ ಜನರ ಕೃತ್ಯಗಳು ನಿಂತು ಹೋದವೇ? ಒಬ್ಬ ಬರಹಗಾರನು ಈ ಟಿಪ್ಪಣಿಯನ್ನು ನೀಡಿರುವನು:

> ಹಿಂಸೆಯ ನಡುವೆಯೇ ಸಭೆಯು ಸ್ಥಾಪನೆಗೊಂಡಿದೆ. ನಂತರದ ಮೂರು ಶತಮಾನಗಳ ಕಾಲ ಅದರ ನೆರಳು ಮುಂದುವರಿಯಿತು, ಅನೇಕ ಸಾರಿ, ಈ ಹಿಂಸೆಗಳ ನಡುವೆಯೂ ಸಭೆಯು ವೃದ್ಧಿಗೊಂಡಿತು. ಮತ್ತು ಉಗುರುಬೆಚ್ಚಗಿದ್ದ ಕ್ರೈಸ್ತರನ್ನು ಹೊರ ಹಾಕಿತು, ಮತ್ತು ಹಗುರ ಮನೋಭಾವದ ಲೋಕವು ಸಭೆಯಲ್ಲಿ ಇರದಂತೆ ಮಾಡಿತು.[34]

ಆದಿ ಕ್ರೈಸ್ತರ ಬಲವಾದ ಸಾಕ್ಷಿಯನ್ನು ಹಾಗೂ ಅವರ ಮನೋಭಾವದ ಕುರಿತ ಇತಿಹಾಸವನ್ನು ರೋಮಾಯದಲ್ಲಿ ಗಮನಿಸುತ್ತೇವೆ. ಕಟಕೊಂಬ್ ಎಂಬ ಕೋಣೆಗಳನ್ನು ರೋಮಾಪುರದ ತಳಭಾಗದಲ್ಲಿ ನಿರ್ಮಿಸಿದ್ದರು, ಅದು ಆ ಪಟ್ಟಣದ ತಳ ಭಾಗದಲ್ಲಿ ಮೈಲುಗಟ್ಟಲೆ ಸ್ಥಳವನ್ನು ಆಕ್ರಮಿಸಿತ್ತು. ಕ್ರೈಸ್ತರು ತಮ್ಮಲ್ಲಿ ಸತ್ತವರನ್ನು ಅಲ್ಲಿ ಸಮಾಧಿಮಾಡುತ್ತಿದ್ದರು, ಅಲ್ಲಿ ಆರಾಧನೆಗಾಗಿ ಸೇರಿಬರುತ್ತಿದ್ದರು, ಕೆಲವು ಸಾರಿ ಸಂರಕ್ಷರಣೆಗಾಗಿ ಅಲ್ಲಿ ಅಡಗಿಕೊಳ್ಳುತ್ತಿದ್ದರು. ಆ ಸುರಂಗ ಮಾರ್ಗದ ಎರಡೂ ಬದಿಗಳಲ್ಲಿ, ಸತ್ತವರನ್ನು ಹೂಣಿಟ್ಟು, ಅದರ ಮೇಲೆ ಬರವಣಿಗೆಯನ್ನು ಮಾಡಿರುವರು. ನೀವು ಆ ಸುರಂಗ ಮಾರ್ಗದಲ್ಲಿ ನಡೆದು, ಸಮಾಧಿಗಳನ್ನು ನೋಡುವಾಗ, ಅದರ ಮೇಲೆ ಕ್ರೈಸ್ತರು ಬರೆದಿರುವ ಪಾರಿವಾಳ, ಕಿರೀಟ ಹಾಗೂ ಲಂಗರುಗಳ ಚಿಹ್ನೆಯನ್ನು ಗಮನಿಸುತ್ತೇವೆ, ಅದು ಅವರ ನಂಬಿಕೆಯ ಸಂಕೇತವಾಗಿದೆ. ಯೇಸುವಿನ, ಒಳ್ಳೆಯ ಕುರುಬನ ಚಿತ್ರವನ್ನು ನೋಡುತ್ತೇವೆ. ಆದರೆ ಅವರನ್ನು ಹಿಂಸಿಸಿದವರ ವಿರುದ್ಧವಾಗಿ ಅವರುಗಳು ಯಾವ ವಿರೋಧವನ್ನು ತೋರದ ಚಿತ್ರಗಳನ್ನು ಅಲ್ಲಿ ಗಮನಿಸಲಾಗುವದಿಲ್ಲ. ಅಲ್ಲಿ ಯಾವುದೇ ವಿಧವಾದ ದುಃಖದ ಹಾಗೂ ಮುಯ್ಯಿ ತೀರಿಸಿಕೊಳ್ಳುವ ಚಿತ್ರವನ್ನು ಕಾಣುವದಿಲ್ಲ; "ಆದರೆ ಪ್ರೀತಿ, ಕನಿಕರ, ಅನುಕಂಪದ ಚಿತ್ರಣವನ್ನು ಮಾತ್ರ ನೋಡುತ್ತೇವೆ."[35]

ಕಡೇಯದಾಗಿ ಡಯೋಕ್ಲೇಟಿಯನ ಆಡಳಿತಾವಧಿಯಲ್ಲಿ ಕ್ರೈಸ್ತರು ಭಯಂಕರವಾದ ಹಿಂಸೆಗೆ ಒಳಗಾದರು. 303ರಲ್ಲಿ ಸಭೆಯ ಕಟ್ಟಡಗಳನ್ನು ನಿರ್ನಾಮ ಮಾಡುವ ಕಟ್ಟಪಣೆಯನ್ನು ನೀಡಿದನು, ಸಭಾ ನಾಯಕರನ್ನು ಬಂಧಿಸಿದನು, ಕ್ರೈಸ್ತರೆಲ್ಲರೂ ಯಜ್ಞಗಳನ್ನು ಸಲ್ಲಿಸ ಬೇಕೆಂದನು, ಮತ್ತು ದೇವರ ವಾಕ್ಯದ ಗ್ರಂಥಗಳನ್ನು ತ್ಯಜಿಸಲು ಒತ್ತಾಯಿಸಿದನು. ಯುವ ಡೀಕನ್ನನಾದ ತಿಮೊಥಿಯನು ಹಾಗೂ ಅವನ ಹೆಂಡತಿಯು ಸತ್ಯವೇದವನ್ನು ಒಪ್ಪಿಸಲು ನಿರಾಕರಿಸಿದ್ದರಿಂದ, ಅವರನ್ನು ಅಕ್ಕ ಪಕ್ಕದಲ್ಲೇ ಶಿಲುಬೆಗೆ ಹಾಕಿದರು.

ಡಯೋಕ್ಲೇಟಿ ಹಾಗೂ ಗಲೇರಿಯಸ್ ಎಂಬವರು ಮಿತಿ ಮೀರಿದ ಹಿಂಸೆಯನ್ನು ಮುಂದುವರಿಸುವಾಗ, ಸಭೆಯು ಬಹಳವಾಗಿ ವೃದ್ಧಿಗೊಂಡು, ಮಾನ್ಯತೆ ಪಡೆಯುವ ಅರ್ಹತೆಗೆ ಬಂದಿತು. 311ರಲ್ಲಿ, ಗಲೇರಿಯನ್ನು ಹಿಂಸೆ ನೀಡುವದನ್ನು ನಿಲ್ಲಿಸಿದನು. 313ರಲ್ಲಿ

ಕಾನ್‌ಸ್ಟಾಂಟನ್ ಮತ್ತು ಲಿಸಿನಿಯಸ್‌ರವರ "ಎಡಿಕ್ಟ್ ಆಫ್ ಮಿಲಾನ್" ಕ್ರೈಸ್ತರಿಗೆ ಪೂರ್ಣವಾದ ನಾಗರೀಕ ಹಕ್ಕನ್ನು ನೀಡಿತು. 323ರಲ್ಲಿ, ಕಾನ್‌ಸ್ಟಾಂಟನನು ಅಧಿಕಾರ ವಹಿಸಿಕೊಂಡಾಗ, ರೋಮಾಯರು ಕ್ರೈಸ್ತರಿಗೆ ನೀಡುತ್ತಿದ್ದ ಉಪಟಳವು ಅಂತ್ಯಗೊಂಡಿತು.[36] ಒಬ್ಬನು ಹೇಳಿರುವಂತೆ, "ರೋಮಾಯರು ಕ್ರೈಸ್ತರನ್ನು ಕತ್ತಿಯಿಂದ ಸಂಧಿಸಿದರೆ, ಕ್ರೈಸ್ತರು ರೋಮಾಯರನ್ನು ಪ್ರೀತಿಯಿಂದ ಸಂಧಿಸಿದರು - ಅಂತ್ಯದಲ್ಲಿ ಪ್ರೀತಿಗೆ ಜಯವಾಯಿತು."

ಅವರಿಗೆ ದೊರಕಿದ ನಾಗರೀಕ ಹಕ್ಕು, ಮಿಶ್ರವಾದ ಆಶೀರ್ವಾದವನ್ನು ನೀಡಿತು, ಯೇಸು ಹಾಗೂ ಪ್ರೇರಿತರಾದ ಬರಹಗಾರರು ಮುಂತಿಳಿಸಿದಂತೆ, ಕಾನ್‌ಸ್ಟಾಂಟ್‌ನು ದೇವ ದೂಷಣೆಯನ್ನು ಮುಂದುವರಿಸಿದನು.[37] ಸಭೆಯ ಹಿನ್ನೆಲೆಯಲ್ಲಿ ಉಂಟಾದ ಸಿದ್ಧಾಂತಗಳ ಕುರಿತು ತಿಳಿಸಲು ಈ ಪಾಠವನ್ನು ನೀಡಿರುವದಿಲ್ಲ. ಅದರ ಬದಲಾಗಿ, ಅದನ್ನು ನಾನು ಸರಳವಾಗಿ ತಿಳಿಸುವೆನು (1) ಸಭೆಯು ಎಷ್ಟೇ ಭ್ರಷ್ಟವಾದರೂ "ಅದರಲ್ಲಿ ಕೆಲವು ನಂಬಿಗಸ್ತ ರಾದವರಿದ್ದರು" ಮತ್ತು (2) ಆ ನಂಬಿಗಸ್ತರು ದೇವರಿಗಾಗಿ "ಕಾರ್ಯ" ಮಾಡಿದರು. ಒಬ್ಬ ಇತಿಹಾಸಕಾರನು ಈ ಉಲ್ಲೇಖವನ್ನು ಮಾಡಿರುವನು:

> ಪರಿಶುದ್ಧವಾದ ಅಂಟುರೋಗದಂತೆ ಕ್ರೈಸ್ತತ್ವವು ಪ್ರಸರಿಸಿತು. ಅದನ್ನು ಒಂದು ವಾಣಿಜ್ಯ ವಿಷಯವನ್ನಾಗಿ ನೋಡಬಹುದು. ಒಂದು ಸಾರಿ ಅದು ಒಂದು ಪಟ್ಟಣದಲ್ಲಿ ಆರಂಭವಾದಾಗ ಅದು ಹತ್ತಿರದ ಸ್ಥಳಕ್ಕೆ ಹರಡಿ, ಅದರ ಬೇರುಗಳು ಮುಂದೆ ಸಾಗುತ್ತಿದ್ದವು. ಪ್ಲಿನಿ ಎಂಬವರು ಬಿಥಾನ್ಯ - ಪೊಂತದ ಕುರಿತು ಹೇಳುವಾಗ, "ಕ್ರೈಸ್ತರ ದೊಡ್ಡ ಗುಂಪು" ಅವರಲ್ಲಿ ಸಕಲ ಲಿಂಗಗಳ, ಸಕಲ ವಯಸ್ಸಿನವರು ಒಳಗೊಂಡಿದ್ದರು. ಈ ವಿಧದ ಎಂಟು ಪಟ್ಟಣ ಹಳ್ಳಿ ಹಾಗೂ ದೇಶಗಳಲ್ಲಿ ಪ್ರಸರಿಸಿತು, ಆದ್ದರಿಂದ ದೇವಸ್ಥಾನಗಳು ಒಂಟಿಯಾದವು, ಸಂಪ್ರದಾಯಗಳು ಮುಂದುವರಿಯಲಿಲ್ಲ, ವಧೆಯ ಪ್ರಾಣಿಗಳನ್ನು ಯಾರೂ ಕೊಂಡುಕೊಳ್ಳಲಿಲ್ಲ.
>
> ಎಫೆಸ್ಸದ ಪೂರ್ವಕ್ಕೆ, ಯೂಫ್ರೇಟಿಸ್‌ನ ಹಿಂಭಾಗದಲ್ಲಿದ್ದ ರಾಜ್ಯದಲ್ಲಿ, ಅಂತಿಯೋಕ್ಯದ ಈಶಾನ್ಯದಲ್ಲಿ, ಕ್ರಿ.ಶ. 200ರಲ್ಲಿ ಒಬ್ಬ ಕ್ರೈಸ್ತ ಅರಸನಿದ್ದನು. ಅವನು ಅಲೆಕ್ಸಾಂದ್ರಿಯದವನು ಸುವಾರ್ತೆಯು ಐಗುಪ್ತ ಮತ್ತು ಸೇರಿನಿನ ಪಶ್ಚಿಮಕ್ಕೂ ಹರಡಿತು, ಪಶ್ಚಿಮದಲ್ಲಿ ಆಫ್ರಿಕದ ಸಂಸ್ಥಾನಕ್ಕೂ ದಕ್ಷಿಣದ ಗಾಲ್‌ನಲ್ಲೂ ಸ್ಪಾನಿಷ್ ಕ್ರೈಸ್ತರಿದ್ದರು ಎಂದು ತಿಳಿಯುತ್ತೇವೆ, ಅವರು (ಎರಡನೇ) ಶತಮಾನದ ಅಂತ್ಯದಲ್ಲಿ ಅಲ್ಲಿದ್ದರು ಹಾಗೂ ಬ್ರಿಟನ್‌ನಲ್ಲಿ ಕೆಲವು ರೋಮನ್ನರು ಹಾಗೂ ಕ್ರೈಸ್ತರಿದ್ದರು.[38]

ಆ ಶತಮಾನಗಳಲ್ಲಿದ್ದ ಕೆಲವು ಮಿಶನರಿಗಳ ಹೆಸರುಗಳು ಮರೆಯಲು ಸಾಧ್ಯವಿಲ್ಲ. ಆ ದಿವಸಗಳಲ್ಲಿ ಸುವಾರ್ತೆಯನ್ನು ನಂಬಿಗಸ್ತಿಗೆಯಿಂದ ಸಾರಿದ ಕ್ರೈಸ್ತರ ಹೆಸರು ಗಳು ಬಾಯಿ ಮಾತಿನಿಂದ ಅನೇಕ ಸ್ಥಳಗಳಿಗೆ ಹರಡಿದವು - ಸುವಾರ್ತೆಗಾಗಿ ಹಿಂಸೆ ಅನುಭವಿಸಿದವರ ಹೆಸರುಗಳು ಮನುಷ್ಯರ ಗ್ರಂಥಗಳಲ್ಲಿ ದಾಖಲಾಗದಿದ್ದರೂ, ದೇವರು ಅವರನ್ನೆಲ್ಲಾ ತಿಳುಕೊಂಡಿದ್ದನು, ಆತನೇ ತನ್ನ ಜನರ "ಅಪೊಸ್ತಲರ ಕೃತ್ಯಗಳನ್ನು" ದಾಖಲು ಮಾಡಿರುವನು.

## ಈ ದಿನಗಳಲ್ಲಿ ದೇವ ಜನರೂ ಸಹ ದೇವರ ಕೃತ್ಯಗಳನ್ನು ಮುಂದುವರಿಸುತ್ತಿರುವರು

ಬರೆಯಲು ಸ್ಥಳಾವಕಾಶ ಇದಿದ್ದರೆ, ಅನೇಕ ದೇಶಗಳಲ್ಲಿ ನಡೆದ ಸುಧಾರಣೆ ಹಾಗೂ ಪುನಃ ಸ್ಥಾಪನೆಯ ವಿಚಾರಗಳನ್ನು ಬರೆಯುತ್ತಿದೆನು. ಸಭೆಗಳು ದೇವರೊಂದಿಗಿನ ಶುದ್ಧತೆ ಯನ್ನು ಹಾಗೂ ಅನ್ಯೋನ್ಯತೆಯನ್ನು ಕಾಪಾಡಲು ಬಹಳ ಶ್ರಮಪಡಬೇಕಾಯಿತು. ಹಾಗೂ ನನ್ನ ಸಭೆಯಲ್ಲಿನ 50 ವರ್ಷಗಳ ಕಾಲಾವಧಿಯಲ್ಲಿ ದೇವರಿಗಾಗಿ ಸಮರ್ಪಿಸಿಕೊಂಡಿದ್ದೆ ಅನೇಕ ನನ್ನ ಸ್ತ್ರೀ ಪುರುಷರ ಬಗ್ಗೆಯೂ ಹೇಳಬಹುದು.[39] ಈ ಪದಗಳನ್ನು ನಾನು

ಬರೆಯುತ್ತಿರುವಾಗಲೇ ಅವರ ಹೆಸರುಗಳು ನನ್ನ ನೆನಪಿಗೆ ಬರುತ್ತವೆ. ಆದರೆ, ಹೇಗೂ ದೇವರು ತಾನೇ ತನ್ನ ಸಭೆಗಳ ನಡುವೆ ನಡೆಯುವಾತನಾಗಿರುವನು (ಪ್ರಕಟನೆ 1:13, 20; 2:1). ಆತನು ಈಗಲೂ ತನ್ನ ಮಕ್ಕಳ ಬಗ್ಗೆ ಅರಿತವನಾಗಿರುವನು (ಪ್ರಕಟನೆ 2:2, 9, 13, 19) ಇನ್ನೂ ಆತನು ಅವರ "ಅಪೊಸ್ತಲರ ಕೃತ್ಯಗಳನ್ನು" ದಾಖಲು ಮಾಡುತ್ತಿರುವನು.

ಅಗಮ್ಯವಾದ ದೇವರ ಕಾರ್ಯಗಳು ಪ್ರಚಲಿತವಾಗಿ ಜರುಗುತ್ತಿವೆ, *ಈ ಟ್ರುಥ್ ಫಾರ್ ಟುಡೇ,* ತಲುಪುವ ಸ್ಥಳಗಳಲ್ಲಿ ಈ ಕಾರ್ಯಗಳು ನಡೆಯುತ್ತಿವೆ. ನೈಜೀರಿಯಾ ಆಫ್ರೀಕದ ಇತರೆ ದೇಶಗಳು, ಹಾಗೂ ಭಾರತದಲ್ಲಿನ ಆತ್ಮಗಳ ಸುಗ್ಗಿಗಾಗಿ ನಾವು ಚಿಂತನ ಮಾಡುವವರಾಗಿ ದ್ದೇವೆ. "ಇವುಗಳನ್ನು ಒದಗಿಸುವದರಲ್ಲಿ" ದೊರಕುವ ಆನಂದವನ್ನು ಕರ್ತನ ಸಿಂಹಾಸನದ ಬಳಿ ಸೇರುವಾಗ ಹಂಚಿಕೊಳ್ಳುವರಾಗಿರುತ್ತೇವೆ! ಪರಲೋಕದ ದಾಖಲೆಗಳಲ್ಲಿ ನೀವಿರುವ ಅಧ್ಯಾಯವನ್ನು ಓದಲು ನಾನು ಉತ್ಸುಕನಾಗಿದ್ದೇನೆ!

ಮುಂದಿನ ಶತಮಾನ ಆರಂಭವಾಗುವದರಲ್ಲಿ ಕರ್ತನು ಬಾರದೆ ಹೋದರೆ, ಆ ಶತಮಾಮಾನವು, ಮೊದಲ ಶತಮಾನದ ಸವಾಲುಗಳನ್ನೇ ಹೊಂದಿರುತ್ತದೆ: "ಲೋಕದ ಕಟ್ಟಕಡೆಯವರೆಗೆ ಹೋಗಿ, ಸುವಾರ್ತೆಯನ್ನು ಸಾರಿ, ಸಕಲ ಜನಾಂಗದವರನ್ನು" ಆತನ "ಶಿಷ್ಯರನ್ನಾಗಿ ಮಾಡಬೇಕು," "ಲೋಕದ ಕೊನೇಯ ಭಾಗಕ್ಕೂ ಹೋಗ ಬೇಕು" (ಮಾರ್ಕ 16:15; ಮತ್ತಾಯ 28:19; ಅಪೊಸ್ತಲರ ಕತ್ಯಗಳು 1:8). ಮೊದಲ ಶತಮಾನದಲ್ಲಿ ಪೌಲ ಮತ್ತು ಇತರರು ಮಾಡಿದಂತೆ, ಈ ಶತಮಾನದಲ್ಲೂ ಇರುವ ಸವಾಲುಗಳನ್ನು ನಾವು ಎದುರಿಸೋಣ. ದೇವರು ನಮ್ಮ ಕುರಿತಾಗಿ ಬರೆಯುವಂತೆ ಆಶ್ಚರ್ಯವಾದ ಸಂಗತಿಯನ್ನು ನೀಡೋಣ![40]

## ಪ್ರಸಂಗದ ಟಿಪ್ಪಣಿಗಳು

ಈ ಮುಂದಿನ ಪಾಠಗಳನ್ನು ಅನೇಕ ಪ್ರಸಂಗಿಗಳು ಹಾಗೂ ಬೋಧಕರುಗಳು, "29ನೇ ಅಧ್ಯಾಯ ಎಂದು ಕರೆದಿರುವರು." ಅಧ್ಯಾಯ 28ರಲ್ಲಿ ದೇವರ ಕಾರ್ಯಗಳು "ಅಪೊಸ್ತಲರ ಕೃತ್ಯಗಳಲ್ಲಿ" ಅಂತ್ಯವಾಗದೆ ಅವುಗಳು ಮುಂದುವರಿದ ಕಾರ್ಯಗಳಾಗಿವೆ.

ಟಿಪ್ಪಣಿಗಳು

[1]ಯುಸೆಬಿಯಸ್ ಎಕ್ಲಿಸ್ಟಿಯಾಟಿಕಲ್ ಹಿಸ್ಟರಿ 2:22. [2]"ಸೆರೆಮನೆ ಪತ್ರಿಕೆಗಳು" ಎಫೆಸ ಫಿಲಿಪ್ಪಿ, ಕೊಲೊಸ್ಸೆ ಮತ್ತು ಫಿಲೆಮೋನ. [3]ಕರ್ತನ ಚಿತ್ತವಾಗಿದ್ದರೆ ಮರಣಕ್ಕೆ ಪೌಲನು ಸಿದ್ಧವಾಗಿದ್ದರೂ, ಬಿಡುಗಡೆ ಬಯಸಿದನು. [4]J. W. McGarvey, *New Commentary on Acts of Apostles,* vol. 2 (Delight, Ark.: Gospel Light Publishing Co., n.d.), 292. [5]*1 Clement* 5. Clement of Rome (ಹೊಲಿಸು 30-100) ರವರು, ಅಪೊಸ್ತಲರ ಪಿತೃಗಳಲ್ಲಿ ಪ್ರಮುಖನಾದವನು. [6]ಟ್ರಾನ್ಸ್‌ಲೇಶನ್ ಆಫ್ ದಿ ಮುರೆಟೋರಿಯನ್ ಫ್ರಾಗ್‌ಮೆಂಟ್ ಹೊಸ ಒಡಂಬಡಿಕೆಯ ಕಾನನ್. Samuel M. Jackson (Grand Rapids, Mich.: Baker Book House, 1977), 8:56. [7]ಪ್ರತಿ ಪಿರ್ಯಾದನ್ನು ನೀರೋ ವ್ಯಕ್ತಿಗತವಾಗಿ "ಕೈಸರನಿಗೆ" ಒಯ್ಯಲಿಲ್ಲ. ಪೌಲನು ಅವನ ಮುಂದೆ ನಿಲ್ಲಲಿಲ್ಲ ಎಂಬ ಅನುಮಾನವಿದೆ, ಯೆಹೂದ್ಯರು ಒತ್ತಾಯ ಮಾಡದೆ ಇದ್ದದ್ದರಿಂದ, ಪೌಲನು ವಿಚಾರಣೆಗೆ ಒಳಪಡಲಿಲ್ಲವೆಂಬ ತರ್ಕವಿದೆ, ಪೌಲನು ಅವನ ಮುಂದೆ ನಿಂತಿರುವದು ನಿಶ್ಚಯ ಎಂದು ನಾನು ಹೇಳುವೆನು. [8]ಪೌಲನ ಅಂತಿಮ ಪ್ರಯಾಣದ ನಕ್ಷೆ ನೋಡಿರಿ. [9]ತೀತನ ಪತ್ರಿಕೆಯನ್ನು ಮೊದಲೇ ಬರೆಯಲಾಗಿತ್ತು ಎಂಬ ಅಭಿಪ್ರಾಯವಿದೆ. [10]1 ಮತ್ತು 2 ತಿಮೊಥೆ ಹಾಗೂ ತೀತ "ಪಾಸ್ಟರಲ್ ಎಪಿಸ್ತಲ್ಸ್" ಪ್ರಸಂಗಿಗೆ ಪಾಸ್ಟರ್ ಎನ್ನುವದಿಲ್ಲ. "ಪ್ರಸಂಗಿಗಳ ಪತ್ರಿಕೆಗಳು" ಎನ್ನಬಹುದು.

[11]Paul Rogers, "At the End of Paul's Life," *The Preacher's Periodical* (May 1985), 27. [12]Quoted in Vera E. Walker, *A First Church History* (London: Student Christian

Movement Press, 1936), 13, 14. [13]ಮೊದಲ ವಾದದ ಬಗ್ಗೆ ವಿಶೇಷ ವ್ಯತ್ಯಾಸಗಳುಂಟು, ವಿಚಾರಣೆಯ ಹಿಂದಿನ ಪ್ರತಿವಾದ. [14]ಪಾಠದಲ್ಲಿರುವ ಮಾಹಿತಿ ಸತ್ಯವೇದದಲ್ಲಿರುವದಿಲ್ಲ, ಪ್ರೇರಿತವಲ್ಲದ, ಆಧಿ ಕ್ರೈಸ್ತರ ಬರವಣಿಗೆ ಇತಿಹಾಸಕಾರರ ದಾಖಲೆಗಳಿಂದ ಇದನ್ನು ತಿಳಿಸಿರುವೆನು. ಪುರಾತನ ಹೇಳಿಕೆಗಳು, ದೇವರ ಪ್ರೇರಿತ ದಾಖಲೆಗಳಿಗೆ ಸಮನಾಗುವದಿಲ್ಲ. [15]ಪರಲೋಕ ಸೇರುವವರೆಗೆ ಮಾತ್ರ ನಮ್ಮ ಅಂತ್ಯದ ವಂದನೆಗಳಿರುತ್ತವೆ. [16]ಅಪೊಸ್ತಲರ ಕೃತ್ಯಗಳು ಅಂತ್ಯದಲ್ಲಿ ಅಪೊಸ್ತಲರೆಲ್ಲರೂ ಯೆರೂಸ ಲೇಮಿನಲ್ಲಿರಲಿಲ್ಲ. [17]ರೋಮಾಯಕ್ಕೆ "ಬಾಬೆಲ್" ಎನ್ನುವರು ಎಂಬ ಅಭಿಪ್ರಾಯವಿದೆ, ಪ್ರಕಟನೆಯಲ್ಲಿ ಅದರ ಉಲ್ಲೇಖವಿರುವದಿಲ್ಲ (ಪ್ರಕಟನೆ 17:5, 9, 10). 1 ಪೇತ್ರ 5:13ರ ರಲ್ಲೂ ಅದರ ಸಂಕೇತ ವಿರುವದಿಲ್ಲ. ಅದು ಯೂಫ್ರೆಟಿಸ್‌ನಲ್ಲಿ ಇದ್ದ ಸ್ಥಳವಾಗಿತು. ಪೇತ್ರನು ಆ ಬಾಬೇಲಿನಿಂದಲೇ ತನ್ನ ಪತ್ರವನ್ನು ಬರೆದಿರಬಹುದು. ಪೌಲನು ರೋಮಾ ಪತ್ರವನ್ನು ಬರೆದಾಗ ರೋಮಾಯದಲ್ಲಿರಲಿಲ್ಲ. ಪೇತ್ರನು ರೋಮಾದಲ್ಲಿ ಮರಣಹೊಂದಿದನು ಎಂಬ ಪ್ರತೀತಿ ಇದೆ. [18]ಪೇತ್ರನು ತನ್ನ ಎರಡನೇ ಪತ್ರಿಕೆಯಲ್ಲಿ, ಪೌಲನ ಕುರಿತ ಉಲ್ಲೆಖಮಾಡಿರುವನು (2 ಪೇತ್ರ 3:15, 16). [19]ಕ್ರಿ.ಶ. 44-62ರ ನಡುವೆ ಯಾಕೋಬ ಪತ್ರಿಕೆಯನ್ನು ಬರೆದಿರಬಹುದು. [20]David Roper, "A Survey of the New Testament," *Truth for Today* (July 1993), 39.

[21]ಅವಕಾಶ ದೊರಕಿದಾಗ, ಯೆಹೂದ್ಯರು ಸಹ ಕ್ರೈಸ್ತರನ್ನು ಹಿಂಸಿಸಿದರು (ಪ್ರಕಟನೆ 2:9, 10); ಕ್ರಿ.ಶ. 70ರ ಯೊಸಲೇಮಿನ ನಾಶನವಾದ ನಂತರ ಅವರು ಒಟ್ಟಾಗಲಿಲ್ಲ. [22]ಕ್ರೈಸ್ತ ಆಚರಣೆಗಳನ್ನು ಹಾಗೂ ಅವರ ಬೋಧನೆಗಳನ್ನು ಜನರು ಅಪಾರ್ಥ ಮಾಡಿ ಕೊಂಡದ್ದರಿಂದ, ಅವರು ಕ್ರೈಸ್ತರನ್ನು ಅಪಾದಿಸಿದರು, ದೇವರ ರಾಜ್ಯದ ಬೋಧನೆ ರಾಜದ್ರೋಹವಾಯಿತು, ಆತ್ಮೀಕ ವರಗಳ ಅಭ್ಯಾಸ ಮಾಟವಾಯಿತು, ಇತರೆ ಕ್ರೈಸ್ತರ ಪ್ರೀತಿಯು ಪ್ರಕೋಪವಾಯಿತು, ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗುವದು, ಮನುಷ್ಯರು ಮನುಷ್ಯರನ್ನೇ ತಿನ್ನುವ ಪ್ರಕ್ರಿಯೆಯಾಯಿತು. [23]S. Angus, "Roman Empire," *International Standard Bible Encyopedia,* ed. James Orr (Grand Rapids, Mich.: Wm. B. Eerdmans Publishing Co., 1960), 3:2607. [24]ಡೆಮಿಸ್ಸಿಯನು ವಸ್‌ಫೈನ್‌ನ ಚಿಕ್ಕ ಮಗನು, ಆತನ ದೊಡ್ಡ ಮಗನು ಟೈಟೇಸ್ ಚಕ್ರವರ್ತಿಯಾಗಿದ್ದನು. ಕ್ರಿ.ಶ. 70ರಲ್ಲಿ ಯೆರೂಸಲೇಮನ್ನು ನಾಶಮಾಡಿದನು. [25]Ray Summers, *Worthy Is the Lamb* (Nashville: Broadman Press, 1951), 83-85. [26]ಪುರಾತನ ಹೇಳಿಕೆಯ ಪ್ರಕಾರ ನೀರೋನ ಆಡಳಿತದ ಹಿಂಸೆಯ ಕಾಲದಲ್ಲಿ ಪೌಲ ಮತ್ತು ಲೂಕರು ಕೊಲ್ಲಲ್ಪಟ್ಟರು ಎಂಬ ಹೇಳಿಕೆಯಿದೆ. [27]ದೋಮಿಯನು ಸತ್ತನಂತರ, ಯೋಹಾನನು ಎಫೆಸಕ್ಕೆ ಹಿದಿರುಗಿದನು ಎಂಬ ಪ್ರತೀತಿ ಇದೆ. ಅಲ್ಲಿ ಅವನು 100 ವರುಷದವನಾದಾಗ ಸಹಜ ಮರಣವನ್ನು ಹೊಂದಿದನು ಎಂದಿದೆ. [28]Quoted in Walker, 17. [29]Marie Gentert King, ed., *Foxe's Book of Martyrs* (Old Tappan, N.J.: Fleming H. Revell Co., 1968), 13-31. [30]*ಅಪೊಸ್ತಲರ ಕೃತ್ಯಗಳು, 4ನೇ* ಪುಸ್ತಕದ *"ಒಂದು ಕುಟುಂಬದ ಪ್ರತಿಕೃತಿ"* ಎಂಬ ಪಾಠದಲ್ಲಿ ಇಗ್ನೇಶಿಯಸನ ವಂಶವನ್ನು ತಿಳಿಸಲಾಗಿದೆ.

[31]ಪಾಲಿಕಾರ್ಪನ ವಂಶಾವಳಿಯನ್ನು *ಅಪೊಸ್ತಲರ ಕೃತ್ಯಗಳು, 4ನೇ* ಪುಸ್ತಕದ *"ಒಂದು ಕುಟುಂಬದ ಪ್ರತಿಕೃತಿ"* ಎಂಬ ಪಾಠದಲ್ಲಿ ತಿಳಿಸಲಾಗಿದೆ. [32]Polycarp *Martydom of Polycarp* 9. [33]ಜಸ್ಮಿನ್ ಮಾರ್ಟಿರನ ವಂಶಾವಳಿಯನ್ನು ತಿಳಿಸಾಗಿದೆ. [34]*Handbook of Church History,* The Living Word Series (Austin, Tex.: R. B. Sweet Co., 1964), 17. [35]Unknown author, quoted in Theodora W. Wilson, *Into the Arena* (London: William Collins Sons and Co., 1944), 102. [36]ಕ್ರೈಸ್ತರ ಸಕಲ ಹಿಂಸೆಯು ಅಂತ್ಯವಾಯಿತು ಎಂದು ತಿಳಿಯಬಾರದು (2 ತಿಮೊಥೆ 3:12). [37]ಮತ್ತಾಯ 24:24 ನೋಡಿರಿ. ಅಪೊಸ್ತಲರ ಕೃತ್ಯಗಳು 20:28-31; 2 ಥೆಸಲೋನಿಕ 2:3-12; 1 ತಿಮೊಥೆ 4:1-3; 2 ತಿಮೊಥೆ 4:1-4; 2 ಪೇತ್ರ 2:1, 2. [38]J. Vernon Bartlet, *Early Church History* (London: The Religious Tract Society, 1894), 19-20. [39]ಈ ಪಾಠವನ್ನು ಪ್ರಸಂಗವಾಗಿ ಉಪಯೋಗಿಸುವುದಾರೆ ಸಭೆಯಲ್ಲಿರುವ "ಸಾಮಾನ್ಯ ಕ್ರೈಸ್ತರ ಬಗ್ಗೆ" ಅವರ ಕ್ರೈಸ್ತ ಆ ಶಕ್ತಿಯನ್ನು ಕಾರ್ಯಗ್ರಂಥದಲ್ಲಿ ಹೇಳಿರುವಂತೆ ಹಂಚಿಕೊಳ್ಳಬಹುದು. [40]ಈ ಪಾಠವನ್ನು ಪ್ರಸಂಗವಾಗಿ ಉಪಯೋಗಿಸುವುದಾದರೆ ಹೇಳುಗರನ್ನು ಸುವಾರ್ತೆಗೆ ವಿಧೇಯರಾಗುವಂತೆ ಪ್ರೋತ್ಸಾಹಿಸತಕ್ಕದ್ದು ಅವರು ಒಪ್ಪಿಕೊಳ್ಳುವುದು ಒಪ್ಪಿಕೊಳ್ಳದೆ ಇರುವುದು ಪರಲೋಕದ ದಾಖಲೆಯಾಗಿದೆ.

## ಪೌಲನ ಅಂತಿಮ ಪ್ರಯಾಣ ಹಾಗೂ ಮರಣ

ಲೂಕನು ಅಪೊಸ್ತಲರ ಕೃತ್ಯವನ್ನು ಅಂತ್ಯಗೊಳಿಸುವಾಗ, ಪೌಲನು ಸೆರೆ ಮನೆಯಲ್ಲಿದ್ದನು

ಎಂಬ ವಿಚಾರವನ್ನು ತಿಳಿಸಿದ್ದರೂ, ಪೌಲನಲ್ಲಿ ಮುಂದುವರಿದ ಚಟುವಟಿಕೆಗಳ ಕುರಿತು ಹೊಸ ಒಡಂಬಡಿಕೆಯ ಮೂರು ಪುಸ್ತಕಗಳಲ್ಲಿ ಗಮನಿಸುತ್ತೇವೆ. 1 ಮತ್ತು 2 ತಿಮೊಥೆ ಹಾಗೂ ತೀತನ ಪುಸ್ತಕಗಳಲ್ಲಿವೆ, ಇವು ಪೌಲನಲ್ಲಿ ತರಬೇತಿ ಗೊಂಡು ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಯುವಕರುಗಳಿಗೆ ಬರೆದ ಪತ್ರಗಳಾಗಿವೆ.

ಸಾಧ್ಯವಾದರೆ ಸ್ಪೇನ್‌ಗೆ ಪೌಲನು ಹೋಗುವವನಿದ್ದನು ಎಂದು ತಿಳಿದಿದ್ದೇವೆ (ರೋಮಾಪುರ 15:24, 28), ಮತ್ತು ಕ್ರಿ.ಶ. 275-339 ಐಸಬಿಯಸ್ ಎಂಬ ಸಭಾ ಚರಿತ್ರಾಕಾರನು, ಪೌಲನು ಸೆರೆಮನೆಯಿಂದ ಬಿಡುಗಡೆಗೊಂಡನು ಎಂದು ಉಲ್ಲೇಖಿಸಿರುವನು. ಅದರ ಸಂಗಡ ಆದಿ ಕ್ರೈಸ್ತರ ಬರವಣಿಗೆಯ ಪ್ರಕಾರ, ಪೌಲನು ಸ್ಪೇನ್ ದೇಶದವರೆಗೂ ಸುವಾರ್ತೆ ಸಾರಿದನು ಎಂಬುದಾಗಿದೆ. ಕ್ರಿ.ಶ. 96ರಲ್ಲಿ ರೋಮಾದ ಕ್ಲೆಮೆಂಟನು ಕೊರಿಂಥದವರಿಗೆ ಬರೆಯುವಾಗ:

> ಪೌಲನನ್ನು ಏಳು ಸಾರಿ ಬಂಧಿಸಿದರೂ, ಪೌಲನು ತಾಳ್ಮೆ ಹಾಗೂ ಸಹಿಸುವಿಕೆಯಲ್ಲಿ ಪರಿಪಕ್ವ ಹೊಂದಿದ್ದನು, ನಂತರ ಅವನನ್ನು ತಪ್ಪಿಸಿಕೊಳ್ಳುವಂತೆ ಮಾಡಿ, ಅವನಿಗೆ ಕಲ್ಲಿನಿಂದ ಹೊಡೆದರು. ಅವನು ಪೂರ್ವ ಪಶ್ಚಿಮಗಳಲ್ಲಿ ಸಾರಿದ ನಂತರ ಅವನು ವರ್ಚಸ್ಸಿನ ವ್ಯಕ್ತಿಯಾಗಿದ್ದನು. ಅವನು ನೀತಿಯನ್ನು ಪ್ರಪಂಚಕ್ಕೆ ಸಾರಿದನು, ಹಾಗೂ ಅವನು ಪಾಶ್ಚಿಮಾತ್ಯಕ್ಕೆ ಬಂದ ನಂತರ, ವೈರಿಗಳಿಂದ ಹಿಂಸೆಗೆ ಒಳಗಾದನು, ನಂತರ ಪರಿಶುದ್ಧ ಸ್ಥಳಕ್ಕೆ ಹೋದನು.[1]

ಪೌಲನು, ತೀತನಿಗೆ, ಅವನು ರೋಮಾಯದ ಸೆರೆಯಿಂದ ಬಿಡುಗಡೆಯಾದೆನು ಎಂದು ಬರೆದನು. ಇತ್ತಿಚೆಗಷ್ಟೆ ತಿಮೊಥೆಯನ್ನು ಎಫೆಸದಲ್ಲಿ ಇರಿಸಿದ್ದನು (1 ತಿಮೊಥೆ 1:3), ಅಲ್ಲಿ ಕೆಲಕಾಲ ತಂಗಿದ ನಂತರ ತೀತನನ್ನು ಕ್ರೇತದಲ್ಲಿ ಇರಿಸಿದ್ದನು (ತೀತ 1:5). ಅವನು ತೀತನನ್ನು ಪುನಃ ನಿಕೊಪೋಲಿಯಲ್ಲಿ ಸಂಧಿಸಲು ಇಚ್ಛಿಸಿದ್ದನು, ಅಲ್ಲಿ ಪೌಲನು ಚಳಿಗಾಲವನ್ನು ಕಳೆಯಲು ಬಯಸಿದ್ದನು (ತೀತ 3:12). ಅದು ಕ್ರೇತ ಮತ್ತು ದಲ್‌ಮಾನುತದ ನಡುವಿನ ಮಾರ್ಗದಲ್ಲಿತ್ತು (2 ತಿಮೊಥೆ 4:10), ತೀತನು ತನ್ನ ಪ್ರಯಾಣವನ್ನು ಆರಂಭಿಸಿದಾಗ, ಪೌಲನು ಅವನನ್ನು ಸಂಧಿಸಿರುವ ಅನುಮಾನವಿದೆ.


2 ತಿಮೊಥೆ ಪತ್ರವನ್ನು ಬರೆಯುವಾಗ, ಪೌಲನು ಮೊದಲನೆಯ ವಿಚಾರಣೆಯನ್ನು ಎದುರಿಸಿ, ರೋಮಾದ ಸೆರೆಯಲ್ಲಿದ್ದನು (2 ತಿಮೊಥೆ 4:16, 17). ಬಹುಶಃ ಬಹುಕಾಲ ಬಂಧಿಯಾಗಿರಲಿಲ್ಲ, ಅವನು ಅಲ್ಲಿ ಪುನಃ ಪ್ರಯಾಣ ಮಾಡಿದ ಸಾಕ್ಷಿಗಳಿವೆ. ಅವನು ತ್ರೋವ ದಲ್ಲಿ ತನ್ನ ಮೇಲಂಗಿಯನ್ನು (2 ತಿಮೊಥೆ 4:13) ಹಾಗೂ ಕೆಲವು ಚರ್ಮದ ಸುರುಳಿಗಳನ್ನು ಬಿಟ್ಟು ಹೋಗಿದ್ದನು (2 ತಿಮೊಥೆ 4:20), ಎಫೆಸದಲ್ಲಿದ್ದನು ಅಲ್ಲಿ ಅವನಿಗೆ ಹಿಂಸೆಯು ಸಂಭವಿಸಿರಬಹುದು (2 ತಿಮೊಥೆ 4:14, 15). 2 ತಿಮೊಥೆಯು, ಪೌಲನ ಕಡೇಯ ಪತ್ರಿಕೆಯಾಗಿದೆ. ಅದರಲ್ಲಿನ ಪದಗಳಲ್ಲಿ ಪೌಲನ ಕೊನೆಯ ಇಷ್ಟ ಹಾಗೂ ಸಾಕ್ಷಿಯನ್ನು ನೋಡುತ್ತೇವೆ, ಅದರಲ್ಲಿ ಉದ್ವೇಗ ಸ್ಪರ್ಷ, ಜವಾಬ್ದಾರಿಯು, ಹಾಗೂ ಜಯದ ಸ್ವರವನ್ನು ನೋಡುತ್ತೇವೆ, ಈ ಸಮಯದಲ್ಲಿ ಅವನಿಗೆ ಮರಣವು ಸಮೀಪವಾಗಿತ್ತು.[2]

ಕ್ರಿ.ಶ. 67ರಲ್ಲಿ ಪೌಲನು ಪುನಃ ಬಂಧನಕ್ಕೊಳಗಾಗಿರಬಹುದು, ಕೆಲವು ಪೂರ್ವ ಹೇಳಿಕೆಯ ಪ್ರಕಾರ, ನೀರೋ ಚಕ್ರವರ್ತಿಯ ಆದೇಶದ ಮೇರೆಗೆ, ಅವನ ತಲೆಯನ್ನು ಕತ್ತರಿಸಿರಬಹುದು.

---

ಟಿಪ್ಪಣಿಗಳು

[1]*1 Clement* 5. [2]R. N. Longenecker, “Paul, the Apostle,” in *The Zondervan Pictorial Encyclopedia of the Bible*, ed. Merrill C. Tenney (Grand Rapids, Mich.: Zondervan Publishing House, 1975), 4:657.


ಗಾಲ್
ಸ್ಪೇನ್
ಕ್ರೇತ್ ನೋವಾ
ತಿಂಗಸ್
ದಲ್ಮಾತ್ಯ
ಅದ್ರಿಯಾಟಿಕ್ ಸಮುದ್ರ
ರೋಮ
ಕಾರ್ಸಿಕಾ
ಇತಾಲ್ಯ
ಸೆರೆದ್ಯ
ಸಿಸಿಲಿ
ಕ್ರೇತ್
ಸುರಕೂಸು
ಮಲ್ತಾ
ತೆರಸೆ
ಮಕೆದೋನ್ಯ
ಫಿಲಿಪ್ಪಿ
ನಿಕೊಪೊಲಿ
ಅಖಾಯ
ಕೊರಿಂಥ
ಏಗಿಯನ್ ಸಮುದ್ರ
ಬೆಸಂತಿಯ
ತ್ರೋವ
ಎಫೆಸ
ಮಿಲೇತ
ಆಸ್ಯ
ಕೊಲೊಸ್ಸೆ
ಲುಸ್ಯ
ಪಂಪುಲ್ಯ
ಕಪ್ಪು ಸಮುದ್ರ
ಪೊಂತ ಮತ್ತು ಬಿಥೂನ್ಯ
ಗಲಾತ್ಯ
ಕಪದೋಕ್ಯ
ಕಿಲಿಕ್ಯ
ತಾರ್ಸ
ಅಂತಿಯೋಕ್ಯ
ಸಿರಿಯ
ಕುಪ್ರ
ಕ್ರೇತ
ಮೆಡಿಟೇರಿಯನ್ ಸಮುದ್ರ
ಕ್ರೇನೆ
ಅಲೆಗ್ಸಾಂದ್ರಿಯಾ
ಯೆರೂಸಲೇಮ
ಈಜಿಪ್ಟ್
ಪೌಲನ ಪ್ರಯಾಣದ ಚಿತ್ರಣ